ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue: 32
ಸಂಪುಟ: 05 ಸಂಚಿಕೆ: 32

Date: 08-02-2026 Sunday

RNI NO : KARKAN/2021/80805 L2/RNP-1285/TMR/2025-27

Page :4 Price: 1.00
ಪುಟ : 4 ಬೆಲೆ: 1.00 ರೂ

## ಉತ್ಪಾದನೋತ್ತರ ಕೃಷಿಯಲ್ಲಿ ತೊಡಗಿ ರೈತರು ಉದ್ಯಮಿಗಳಾಗಬಹುದು:ಕೇಂದ್ರದ ಕುತಂತ್ರವನ್ನು ವಿರೋಧಿಸಿ–ರೈತರಿಗೆ ಸಿಎಂ ಕರೆ



ಬೆಂಗಳೂರು, : ಮನರೇಗಾ ರದ್ದುಪಡಿಸಿ ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿಗೊಳಿಸಿದ ಕೇಂದ್ರಸರ್ಕಾರದ ಕುತಂತ್ರವನ್ನ ರಾಜ್ಯದ ರೈತರು ಒಕ್ಕೊರಲಿನಿಂದ ವಿರೋಧಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ಅವರು ಇಂದು ಅಂತರರಾಷ್ಟ್ರೀಯ ವಾಣಿಜ್ಯ ಮೇಳ –2026 ಉತ್ಪದಾನೋತ್ತರ ಕೃಷಿ – ರೈತರ ಸಬಲೀಕರಣ ಹಾಗೂ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

*ಮಹಿಳಾ ಕೃಷಿಕರ ಸಾಧನೆ ಸ್ಪೂರ್ತಿದಾಯಕ*
ನಮ್ಮ ಸರ್ಕಾರ ಕೃಷಿ ಕ್ಷೇತ್ರಕ್ಕೆ ಎಂದಿಗೂ ಬೆಂಬಲವಾಗಿ ನಿಂತಿದೆ. ಕೃಷಿ ಲಾಭದಾಯಕವಾಗಿಸಲು ಹಾಗೂ ಕೃಷಿಕರ ಸಬಲೀಕರಣವನ್ನು ಸಾಧಿಸಲು ಸರ್ಕಾರ ಹೆಚ್ಚಿನ ಒತ್ತು ನೀಡುತ್ತದೆ. ಕೃಷಿ ಹಾಗೂ ಉತ್ಪಾದನೋತ್ತರ ಚಟುವಟಿಕೆಗಳಲ್ಲಿ ರೈತರು ತೊಡಗಿಕೊಳ್ಳುವ ಮೂಲಕ ಕೃಷಿಯನ್ನು ಲಾಭದಾಯಕಗೊಳಿಸಬಹುದಾಗಿದೆ. ರೈತರು ಉದ್ಯಮಿಗಳಾಗಬೇಕು . ಉತ್ಪನ್ನಗಳನ್ನು ಬೆಳೆಯುವ ಜೊತೆಗೆ, ಸಂಗ್ರಹಣೆ, ಸಂಸ್ಕರಣೆ, ಪ್ಯಾಕೇಜಿಂಗ್, ಮಾರುಕಟ್ಟೆ, ಉಪಉತ್ಪನ್ನಗಳ ಅಭಿವೃದ್ಧಿಯಲ್ಲಿ ರೈತರು ನಿರತರಾಗಬೇಕಿದೆ. ಕೃಷಿಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ತೊಡಗಿಕೊಳ್ಳುವುದು ಅಗತ್ಯ. ಇಂದಿನ ಪ್ರಶಸ್ತಿಗೆ ಭಾಜನರಾದ ಮಹಿಳಾ ಕೃಷಿಕರ ಸಾಧನೆ ಸ್ಪೂರ್ತಿದಾಯಕವಾಗಿದೆ ಎಂದರು.

*ರೈತರ ಸಮಸ್ಯೆಗೆ ಓಗೊಟ್ಟ ಸ್ಪಂದನಾಶೀಲ ಸರ್ಕಾರ*
ರೈತರಿಗೆ ಉತ್ತಮವಾದ ಬಿತ್ತನೆ ಬೀಜ, ಗೊಬ್ಬರ, ಔಷದಿ, ಸರ್ಕಾರ ಒದಗಿಸುತ್ತಿದ್ದು, ಯಂತ್ರೋಪಕರಣಗಳ ಖರೀದಿಗೆ 1,500 ಕೋಟಿ ಸಹಾಯಧನವನ್ನು ನೀಡಲಾಗುತ್ತಿದೆ. ಬೆಳೆವಿಮೆ ಯೋಜನೆ ಜಾರಿಯಲ್ಲಿ ಕರ್ನಾಟಕ, ದೇಶದಲ್ಲಿ ನಂ.1 ರಾಜ್ಯವಾಗಿದ್ದು, ಈವರೆಗೆ 6000 ಕೋಟಿ ರೂ.ಗಳ ವಿಮೆಪರಿಹಾರವನ್ನು ರೈತರಿಗೆ ವಿತರಿಸಲಾಗಿದೆ. ಕಬ್ಬು, ರಾಗಿ ಸೇರಿದಂತೆ ಹಲವು ಬೆಳೆಗಳನ್ನು ಬೆಳೆಸುವುದಕ್ಕೆ ರೈತರು ಸೀಮಿತವಾಗುತ್ತಿದ್ದಾರೆ. ಆದರೆ ಬೆಳೆ ತೆಗೆದ ನಂತರ ಚಟುವಟಿಕೆಗಳಲ್ಲಿ ರೈತರು ಕೈಗೊಳ್ಳಬೇಕು. ಕಬ್ಬು ಬೆಳೆ ರೈತರೊಂದಿಗೆ ಚರ್ಚಿಸಿ ಸಂಧಾನ ನಡೆಸಿ ಕಬ್ಬು ಬೆಳೆಗೆ ಬೆಲೆ ನಿಗಧಿ ಪಡಿಸಲಾಯಿತು. ಅಂತೆಯೇ ತೊಗರಿ ಬೆಳೆಗೆ ಖರೀದಿ ಕೇಂದ್ರವನ್ನು ಒಂದು ತಿಂಗಳ ಮುಂಚೆಯೇ ತೆರೆದು ರೈತರಿಗೆ ಅನುಕೂಲ ಕಲ್ಪಿಸಲಾಯಿತು. ಮೆಕ್ಕೆ ಜೋಳ ಹೆಚ್ಚುವರಿ ಇಳುವರಿ ಬಂದು 54 ಲಕ್ಷ ಮೆ. ಟನ್ ಉತ್ಪಾದನೆಯಾಗಬಹುದಾಗಿದೆ. ಆದ್ದರಿಂದ ಕೇಂದ್ರ ಕ್ವಿಂಟಾಲ್ ವೊಂದಕ್ಕೆ 2400 ರೂ. ನಿಗದಿಪಡಿಸಿದ್ದು, ಮೆಕ್ಕೆಜೋಳ ಬಳಸುವ ಕಾರ್ಖಾನೆಗಳು, ಎಥನಾಲ್ ತಯಾರಕರೊಂದಿಗೆ ಚರ್ಚೆ ನಡೆಸಿ, 40 ಲಕ್ಷ ಮೆ.ಟನ್ ಮೆಕ್ಕೆಜೋಳ ಖರೀದಿಗೆ ಅನುವು ಮಾಡಿಕೊಡಲಾಯಿತು ಎಂದರು.

*ಯುವಜನರು ಕೃಷಿಯಲ್ಲಿ ತೊಡಗಿಕೊಳ್ಳಬೇಕು*
ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿಕೊಳ್ಳಬೇಕು. ಸ್ವಾತಂತ್ರ್ಯಪೂರ್ವದಲ್ಲಿ ಶೇ.80 ರಷ್ಟು ಜನ ಕೃಷಿಯನ್ನು ಅವಲಂಬಿಸಿದ್ದರು. ಈಗ ಈ ಪ್ರತಿಶತ ಶೇ. 62 ಕ್ಕೆ ಇಳಿದಿದೆ. ಕೃಷಿಯಲ್ಲಿ ಉತ್ಪಾದನೋತ್ತರ ಕಾರ್ಯಗಳನ್ನು ಕೈಗೊಂಡಾಗ ಮಾತ್ರ ಕೃಷಿ ಲಾಭದಾಯಕವಾಗುತ್ತದೆ ಎಂದರು.

*ಕೃಷಿಭಾಗ್ಯ ಯೋಜನೆ ಮರುಸ್ಥಾಪನೆ*ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳಲ್ಲಿ ಬಹಳಷ್ಟು ಈಡೇರಿಸಲಾಗಿದ್ದು, ಅವುಗಳಲ್ಲಿ ಜಾರಿಯಾಗಿರುವ ಕೃಷಿ ಭಾಗ್ಯ ಯೋಜನೆ ಪ್ರಮುಖವಾಗಿದೆ. ಬಿಜೆಪಿ ತನ್ ಅಧಿಕಾರಾವಧಿಯಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ನಮ್ಮ ಸರ್ಕಾರ ಮತ್ತೊಮ್ಮೆ ಕೃಷಿ ಭಾಗ್ಯ ಯೋಜನೆಯನ್ನು ಮರುಸ್ಥಾಪಿಸಿದೆ. ಸುಮಾರು 200 ಕೋಟಿ ಅನುದಾನವನ್ನು ಇದಕ್ಕಾಗಿ ನೀಡಲಾಗಿದೆ. ನಮ್ಮ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರಿಗಾಗಿ ಮಾಡಿದ ಶಕ್ತಿ, ಗೃಹಜ್ಯೋತಿ ಹಾಗೂ ಗೃಹಲಕ್ಷ್ಮಿ ಯೋಜನೆಗಳು ಅತ್ಯಂತ ಪ್ರಮುಖವೆನಿಸಿವೆ. ಅಲ್ಲದೇ ಅನ್ನಭಾಗ್ಯ ಯೋಜನೆಗಳಿಂದ ಬಡವರು ಉಳಿತಾಯದಲ್ಲಿ ಹೂಡಿಕೆ ಮಾಡಬಹುದಾಗಿದೆ. ಎಲ್ಲರಿಗೂ ಸಮಾನ ಅವಕಾಶವನ್ನು ನೀಡುವ ಉದ್ದೇಶದಿಂದ ಈ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

*ರಾಜ್ಯಗಳ ಸಮ್ಮತಿಯಿಲ್ಲದ ವಿಬಿಜಿರಾಮ್ ಜಿ ಕಾಯ್ದೆ*
ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಸರ್ಕಾರ ಈ ಹಿಂದೆ ಮನರೇಗಾ ಯೋಜನೆಯನ್ನು ಜಾರಿಗೊಳಿಸಿತ್ತು. ಇದರಡಿ ಮಹಿಳೆಯರು, ಅದಿವಾಸಿಗಳು, ಕಾರ್ಮಿಕರಿಗೆ ಉದ್ಯೋಗ ನೀಡುವ ಉತ್ತಮ ಯೋಜನೆಯಾಗಿದ್ದು, ಗ್ರಾಮಸಭೆಗಳಲ್ಲಿ ಕಾಮಗಾರಿಗಳು ನಿರ್ಧಾರವಾಗುತ್ತಿತ್ತು. ಆದರೆ ಈ ಅಧಿಕಾರವು ಈಗ ಕೇಂದ್ರ ಸರ್ಕಾರದ ಕೈಯಲ್ಲಿದ್ದು, ಅವರ ನಿರ್ಧರಿಸಿದಂತೆ ಕಾಮಗಾರಿ, ಅನುದಾನ ನೀಡಲಾಗುತ್ತದೆ. ರಾಜ್ಯದ ರೈತರೆಲ್ಲರೂ ಮನರೇಗಾ ಯೋಜನೆಯನ್ನು ಮರುಸ್ಥಾಪಿಸಿ, ವಿಬಿ ಜಿ ರಾಮ್ ಜಿ ಯೋಜನೆಯನ್ನು ತಿರಸ್ಕರಿಸಬೇಕು ಎಂಬು ಮನವಿ ಮಾಡಿದರು. ಮನರೇಗಾ ಅಡಿಯಲ್ಲಿ ಕಾರ್ಮಿಕರ ವೇತನ ಪೂರ್ತಿಯಾಗಿ ಕೇಂದ್ರವೇ ನೀಡುತ್ತಿತ್ತು. ಆದರೆ ಈಗ ಕೇಂದ್ರ ಕೇವಲ 60% ಅನುದಾನ ನೀಡುತ್ತಿದ್ದು, ಶೇ.40 ರಷ್ಟನ್ನು ರಾಜ್ಯ ಭರಿಸಬೇಕಾಗಿದೆ. ಹಿಂದೆ 100 ದಿನ ಕೆಲಸದ ದಿನಗಳನ್ನು ಖಾತ್ರಿಪಡಿಸುತ್ತಿತ್ತು. ರಾಜ್ಯ ಸರ್ಕಾರಗಳ ಅಂಗೀಕಾರವಿಲ್ಲದೇ, ಮನರೇಗಾ ವನ್ನು ರದ್ದುಪಡಿಸಿ ವಿಬಿಜಿರಾಮ್ ಜಿ ಯೋಜನೆಯನ್ನು ಜಾರಿಗೊಳಿಸಿದ್ದು, ಅದರಲ್ಲಿನ ಮಹಾತ್ಮಾಗಾಂಧಿ ಹೆಸರನ್ನು ತೆಗೆಯಲಾಗಿದೆ ಎಂದರು.

## ಪ್ರಣವಾನಂದ ಸ್ವಾಮೀಜಿ ಪಾದಯಾತ್ರೆ ನಗರಕ್ಕೆ ಆಗಮನ
## ವಿವಿಧ ಬೇಡಿಕೆ ಈಡೇರಿಕೆಗೆ ಸರ್ಕಾರಕ್ಕೆ ಒತ್ತಾಯಿಸಿ ಹೋರಾಟ



ತುಮಕೂರು: ರಾಜ್ಯದ ಈಡಿಗ, ಬಿಲ್ಲವ, ನಾಮಧಾರಿ, ದೀವರು ಮುಂತಾದ 26 ಸಹಜಾತಿಗಳ ವಿವಿಧ 18 ಬೇಡಿಕೆಗಳನ್ನು ಈಡೇರಿಸಲು ಸರ್ಕಾರವನ್ನು ಒತ್ತಾಯಿಸಿ ಕಲಬುರ್ಗಿ ಜಿಲ್ಲೆ ಕರದಾಳು ಶಕ್ತಿಪೀಠ ಅಧ್ಯಕ್ಷರಾದ ಪ್ರಣಾವಾನಂದ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿಗೆ ಹೊರಟಿರುವ ಪಾದಯಾತ್ರೆ ಶನಿವಾರ ನಗರಕ್ಕೆ ಆಗಮಿಸಿತು. ಜಿಲ್ಲೆಯ ಸಮಾಜದ ಮುಖಂಡರು ತಾಲ್ಲೂಕಿನ ಕೋರಾ ಬಳಿ ಪಾದಯಾತ್ರೆಯನ್ನು ಸ್ವಾಗತಿಸಿ ಬರಮಾಡಿಕೊಂಡರು. ಜಗದ್ಗುರು ನಾರಾಯಣ ಗುರುಗಳ ಮೂರ್ತಿಯ ಮೆರವಣಿಗೆಯೊಂದಿಗೆ ಪ್ರಣಾವಾನಂದ ಸ್ವಾಮೀಜಿ ನೇತೃತ್ವದ ಪಾದಯಾತ್ರೆ ಸಾಗಿದೆ. ಪಾದಯಾತ್ರೆ ತಂಡ ಶನಿವಾರ ಆಗಮಿಸಿ ನಗರದ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಹೂಡಿದೆ, ಇದೇ 9ರಂದು ಬೆಳಿಗ್ಗೆ 6 ಗಂಟೆಗೆ ಹೊರಟು ದಾಬಸ್‌ಪೇಟೆ ಮಾರ್ಗವಾಗಿ ಬೆಂಗಳೂರು ಕಡೆ ಪ್ರಯಾಣ ಬೆಳೆಸಲಿದೆ.ಪ್ರವಾಸಿ ಮಂದಿರದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕುಗಳ ಮುಖಂಡರ ಸಭೆ ನಡೆಸಿದ ಪ್ರಣವಾನಂದ ಸ್ವಾಮೀಜಿ, 12ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು, ತಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದಿದ್ದರೆ ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ಹೇಳಿದರು.
ಬೆಂಗಳೂರಿನಲ್ಲಿ ಸರ್ಕಾರ ಜಗದ್ಗುರು ನಾರಾಯಣಗುರುಗಳ ಪುತ್ಥಳಿ ಸ್ಥಾಪನೆ ಮಾಡಬೇಕು, ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ 500 ಕೋಟಿ ರೂ. ಅನುದಾನ ನೀಡಬೇಕು, ಸಮಾಜದ ಕುಲಕಸುಬಾದ ಸೇಂದಿ ಮಾರಾಟಕ್ಕೆ ವ್ಯವಸ್ಥೆ ಜಾರಿ ಮಾಡಬೇಕು, ನಿರಾ ನಿಗಮ ಸ್ಥಾಪನೆ ಮಾಡಬೇಕು, ಕಲ್ಯಾಣ ಕರ್ನಾಟಕ ಭಾಗದಲ್ಲಿ 5 ಎಕರೆ ಜಮೀನು ನೀಡಿ ಸಮಾಜದ ವಿದ್ಯಾರ್ಥಿಗಳ ಐಎಎಸ್, ಐಪಿಎಸ್ ಮತ್ತಿತರ ಸ್ಪರ್ಧಾತ್ಮಕ ಕೋರ್ಸ್‌ಗಳು ಹಾಗೂ ಕುಲಕಸುಬು ತರಬೇತಿ ಕೇಂದ್ರ ಸ್ಥಾಪನೆ ಮಾಡಬೇಕು ಎಂಬುದೂ ಸೇರಿದಂತೆ ವಿವಿಧ 18 ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗಿದೆ ಎಂದು ಸ್ವಾಮೀಜಿ ಹೇಳಿದರು.
ಬೇಡಿಕೆಗಳಿಗೆ ಸರ್ಕಾರವನ್ನು ಒತ್ತಾಯಿಸುವುದಲ್ಲದೆ ನಮ್ಮ ಸಮಾಜದಲ್ಲಿ ಸ್ವಾಭಿಮಾನ ಹೆಚ್ಚಿಸಲು ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಕರದಾಳು ಶಕ್ತಿಪೀಠದಿಂದ ಇಲ್ಲಿಯವರೆಗೆ 33 ದಿನ 630 ಕಿ.ಮೀ ದೂರ ಪಾದಯಾತ್ರೆ ಮಾಡಲಾಗಿದೆ. 9ರಂದು ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಲಾಗುವುದು. ಈ ಜಿಲ್ಲೆಯಿಂದ ಕನಿಷ್ಠ ಒಂದು ಸಾವಿರ ಜನ ಫ್ರೀಡಂ ಪಾರ್ಕ್ ಪ್ರತಿಭಟನೆಯಲ್ಲಿ ಭಾಗವಹಿಸುವರು ಎಂದು ಪ್ರಣವಾನಂದ ಸ್ವಾಮೀಜಿ ಹೇಳಿದರು.
ರಾಷ್ಟ್ರೀಯ ಈಡಿಗ ಮಹಾಮಂಡಲಿಯ ಜಿಲ್ಲಾಧ್ಯಕ್ಷ ಸುರೇಶ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀನರಸಯ್ಯ, ಕಾರ್ಯದರ್ಶಿ ಡಿ.ಆರ್.ಹನುಮಂತರಾಜು, ಜಗದ್ಗುರು ನಾರಾಯಣಗುರು ಸೇವಾ ಸಮಾಜಂ ಉಪಾಧ್ಯಕ್ಷ ರಾಜನ್, ಕಾರ್ಯದರ್ಶಿ ಬಿ.ಪಿ.ರಾಜೇಶ್, ಶಿರಾ ತಾಲ್ಲೂಕು ಅಧ್ಯಕ್ಷ ಅಜ್ಜೇನಹಳ್ಳಿ ರಮೇಶ್, ರಾಷ್ಟ್ರೀಯ ಈಡಿಗ ಮಹಾಮಂಡಳಿ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಪ್ರಭಾ ವಸಂತ್, ಮುಖಂಡರಾದ ಸಂತೋಷ್, ವಸಂತ ರಾಜನ್ ಸೇರಿದಂತೆ ವಿವಿಧ ತಾಲ್ಲೂಕುಗಳ ಮುಖಂಡರು ಹಾಜರಿದ್ದರು.

## ಸ್ಥಳೀಯ ಸಂಸ್ಥೆಗಳ ಚುನಾವಣೆಯ ಹಿನ್ನೆಲೆ: ಪಕ್ಷದ ಗೆಲುವಿಗಾಗಿ ದುಡಿಯಿರಿ



ತುಮಕೂರು:ಪಕ್ಷಅಧಿಕಾರದಲ್ಲಿದ್ದ ಸಂದರ್ಭದಲ್ಲಿಯೂ ಪಕ್ಷದ ಗೆಲುವಿಗಾಗಿ ದುಡಿದಕಾರ್ಯಕರ್ತರಿಗೆಅಧಿಕಾರದೊರೆಯದಿರುವುದು ಸಹಜವಾಗಿಯೆ ೞಅಸಮಾಧಾನಕ್ಕೆಕಾರಣವಾಗಿದೆ.ಈ ವಿಚಾರವಾಗಿ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಪಕ್ಷದ ಹಿರಿಯರೊಂದಿಗೆ ಮಾತನಾಡುವುದಾಗಿ ಕರ್ನಾಟಕ ಸರಕಾರದದೆಹಲಿ ವಿಶೇಷ ಪ್ರತಿನಿಧಿ ಹಾಗೂ ಶಿರಾ ಕ್ಷೇತ್ರದ ಶಾಸಕ ಟಿ.ಬಿ.ಜಯಚಂದ್ರ ಭರವಸೆ ನೀಡಿದ್ದಾರೆ.
ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಹಿನ್ನೆಲೆಯಲ್ಲಿ ಕೆಪಿಸಿಸಿ ವೀಕ್ಷಕರಾದ ವೆಂಕಟರಮಣಯ್ಯ, ಹುಸೇನ್ ಸಾಬ್,ಇಬ್ರಾಹಿಂಖಲೀಂವುಲ್ಲಾ ಅವರುಗಳ ಸಮ್ಮುಖದಲ್ಲಿಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಜಿ.ಚಂದ್ರಶೇಖರ್‌ಗೌಡಅವರ ನೇತೃತ್ವದಲ್ಲಿ ನಡೆದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳು,ವಿವಿಧ ಮಂಚೂಣಿ ಘಟಕಗಳ ಅಧ್ಯಕ್ಷರು,ಪದಾಧಿಕಾರಿಗಳು, ಕಾರ್ಯಕರ್ತರುಗಳ ಸಭೆಯಲ್ಲಿಕಾರ್ಯಕರ್ತರಅಭಿಪ್ರಾಯ ಆಲಿಸಿದ ನಂತರ ಮಾತನಾಡಿದಅವರು,ಮುಂದಿನ ಮೇ–ಜೂನ್‌ನಲ್ಲಿಜಿ.ಪಂ., ತಾ.ಪಂ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಬರಲಿದೆ.ಹಾಗಾಗಿ ಕಾರ್ಯಕರ್ತರು ಪಕ್ಷದ ಗೆಲುವಿಗೆ ಶ್ರಮಿಸಬೇಕಾಗಿದೆಎಂದರು.
ಕೆಪಿಸಿಸಿ ವೀಕ್ಷಕರಾದ ಮಾಜಿ ಶಾಸಕರಾದ ವೆಂಕಟರಮಣಯ್ಯ ಮಾತನಾಡಿ,ವ ಹಾತ್ಮಗಾಂಧಿಯನ್ನುಇಡೀ ವಿಶ್ವವೇ ಶಾಂತಿಯಧೂತಎಂದುಕೊಂಡಾಡುತ್ತಿದೆ. ಆದರೆ ಬಿಜೆಪಿ ನಾಯಕರು ಮನ್ನರೇಗಾವನ್ನು ವಿಬಿ ಜೀ–ರಾಮಜೀಎಂದು ಹೆಸರು ಬದಲಾಯಿಸಿ, ದೆಹಲಿಯಿಂದ ಹಳ್ಳಿಗೆ ವರ್ಗಾಯಿಸಲ್ಪಟ್ಟಅಧಿಕಾರವನ್ನುದೆಹಲಿಗೆ ಸೀಮಿತಗೊಳಿಸುವ ಮೂಲಕ ಗಾಂಧಿ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡಿದೆ.ಕೃಷಿ ಕಾರ್ಮಿಕರು, ಗ್ರಾಮೀಣಜನರನ್ನು ಮನಸ್ಸನಲ್ಲಿಟ್ಟುಕೊಂಡುಜಾರಿಗೆ ಬಂದ ನರೇಗಾದಲ್ಲಿಗುತ್ತಿಗೆದಾರರಿಗೆ ಅವಕಾಶ ಕಲ್ಪಿಸುವ ಮೂಲಕ ಯಂತ್ರಗಳ ಬಳಕೆಗೆ ಒತ್ತು ನೀಡಲಾಗಿದೆ. ಇದರಿಂದ ಮನೆಯ ಬಳಿಯೇ ಉದ್ಯೋಗ ಸಿಗಬೇಕೆಂಬ ಬಹುದಿನದಯೋಜನೆಗೆ ಬಿಜೆಪಿ ಕಲ್ಲು ಹಾಕಿದೆ.ಹಾಗಾಗಿಯೇಇದರ ವಿರುದ್ಧ ಕಾಂಗ್ರೆಸ್ ಪ್ರತಿಭಟಿಸುತ್ತಿದೆಎಂದರು.
ವೀಕ್ಷಕರಾದ ಹುಸೇನ್ ಸಾಬ್ ಮಾತನಾಡಿ,ನಾನು ಒಬ್ಬಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತ.2010ರಲ್ಲಿ ನನ್ನನ್ನು ಗುರುತಿಸಿ ಪಕ್ಷ ಹಲವು ಜವಾಬ್ದಾರಿ ನೀಡಿದೆ. ಒಮ್ಮೆ ವಕ್ಫ್ ಬೋರ್ಡ್‌ಅಧ್ಯಕ್ಷನನ್ನಾಗಿಯೂ ಮಾಡಿದೆ. ಕಾರ್ಯಕರ್ತರು ನಿರಾಶರಾಗುವುದು ಬೇಡ. ನಿಮ್ಮ ಆಹವಾಲನ್ನು ಪಕ್ಷದ ಹಿರಿಯ ಮುಂದಿಡುತ್ತೇವೆ. ಪಕ್ಷದ ಸಂಘಟನೆಗೆಎಲ್ಲರೂಒತ್ತು ನೀಡೋಣ. ಮುಂಬರುವ ಚುನಾವಣೆಗಳಲ್ಲಿ ಗೆಲವು ನಮ್ಮದಾಗುವಂತೆದುಡಿಯೋಣಎಂದರು.
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇಕ್ಬಾಲ್ ಅಹ್ಮದ್ ಮಾತನಾಡಿ,ಪಕ್ಷದಲ್ಲಿಅಧಿಕಾರ ಬೇರೆ, ಸಂಘಟನೆ ಬೇರೆ.ಜಿಲ್ಲಾಉಸ್ತುವಾರಿ ಸಚಿವರಾದ ಡಾ.ಜಿ.ಪರಮೇಶ್ವರ್ ತುಮಕೂರನ್ನುಗ್ರೇಟರ್‌ತುಮಕೂರು ಮಾಡಲು ಪ್ರಯತ್ನಿಸುತ್ತಿದ್ದಾರೆ. ಸಾವಿರಾರುಕೋಟಿರೂಅನುದಾನ ಹರಿದು ಬರುತ್ತಿದೆ.ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಪಕ್ಷವನ್ನು ಬಲಪಡಿಸಲು ನಾವೆಲ್ಲರೂಕೈಜೋಡಿಸಬೇಕಾಗಿದೆ.ಕಾಂಗ್ರೆಸ್ ಪಕ್ಷವನ್ನು ಸೋಲಿಸುವ ಉದ್ದೇಶದಿಂದಲೇಎಸ್.ಐ.ಆರ್. ತಂದು ಕಾಂಗ್ರೆಸ್ ಪಕ್ಷದ ಸಂಪ್ರದಾಯಕ ಮತದಾರರಾದದಲಿತರು, ಮುಸ್ಲಿಂರು, ಹಿಂದುಳಿದ ಸಮುದಾಯಗಳ ಓಟ್‌ಗಳನ್ನು ಡಿಲೀಟ್ ಮಾಡಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತಿದ್ದು, ಇಲ್ಲಿ ಪಕ್ಷದ ಬಿ.ಎಲ್.ಓ02ಗಳ ಪಾತ್ರದೊಡ್ಡದಿದೆ.ತಮ್ಮ ಬೂತ್‌ಗಳಲ್ಲಿ ಡಿಲೀಟ್‌ಆಗಿರುವ ಮತದಾರರ ಪಟ್ಟಿ ಪಡೆದು,ಸಕಾರಣವಲ್ಲದಡಿಲೀಟ್ ವಿರುದ್ಧಅಕ್ಷೇಪಣೆ ಸಲ್ಲಿಸಿ, ಅವರ ಹೆಸರು ಸೇರುವಂತೆ ಮಾಡಬೇಕು.ಒಬ್ಬ ಮತದಾರನ್ನುತನ್ನ ಹಕ್ಕಿನಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕಾಗಿದೆ ಎಂದರು.
ಪ್ರಾಸ್ತಾವಿಕವಾಗಿ ಮಾತನಾಡಿದಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಜಿ. ಚಂದ್ರಶೇಖರಗೌಡ,ಎಸ್.ಐ.ಆರ್.ಮೂಲಕ ಕಾಂಗ್ರೆಸ್‌ಪಕ್ಷದ ಹಿತೈಷಿಗಳ ಮತಗಳನ್ನು ಡಿಲೀಟ್ ಮಾಡಿಸುವ ಪ್ರಕ್ರಿಯೆಚಾಲ್ತಿಯಲ್ಲಿದೆ. ಈಗಾಗಲೇ ಬಿಹಾರ,ಮುಂಬೈ ನಲ್ಲಿಇದೇಕುತಂತ್ರದಿಂದ ಬಿಜೆಪಿ ಗೆಲುವು ಸಾಧಿಸಿದೆ.ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಕರ್ನಾಟಕದಲ್ಲಿಯೂ ಈ ಪ್ರಕ್ರಿಯೆಚಾಲ್ತಿಯಲ್ಲಿದೆ.ಈಗಾಗಲೇತುಮಕೂರು ನಗರಎಂ.ಎಲ್.ಎಜೊತೆಗೆ,ಎಂ.ಪಿ. ಸ್ಥಾನವನ್ನು ಕಳೆದುಕೊಂಡಿದ್ದೇವೆ. ಹಾಗಾಗಿ ನಗರಪಾಲಿಕೆಅಧಿಕಾರ ಹಿಡಿಯಲು ಶತಾಯ, ಗತಾಯ ಹೋರಾಡಬೇಕಾಗಿದೆಎಂದರು.
ಸಭೆಯನ್ನು ಉದ್ದೇಶಿಸಿ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷರುಗಳಾದ ಎಸ್. ಷಪಿಅಹಮದ್,ಆರ್.ರಾಮಕೃಷ್ಣ, ಬಿ.ಎಂ.ಟಿ.ಸಿ ಉಪಾಧ್ಯಕ್ಷ ನಿಕೇತರಾಜ್ ಮೌರ್ಯ ಮತ್ತಿತರರು ಮಾತನಾಡಿದರು.ವೇದಿಕೆಯಲ್ಲಿ ಪಕ್ಷದ ಮುಖಂಡರಾದ ನರಸೀಯಪ್ಪ, ಎಸ್.ಟಿ.ಶ್ರೀನಿವಾಸ್, ಕೆಂಪಣ್ಣ, ಅನಿಲ್‌ಕುಮಾರ್, ರೂಪಾ ಶೆಟ್ಟಾಳಯ್ಯ,ಗೀತಾ ರಾಜಣ್ಣ, ನಯಾಜ್‌ಅಹಮದ್, ಸುಜಾತ, ನಿಂಗರಾಜು, ಕುಮಾರಸ್ವಾಮಿ, ವಾಲೆಚಂದ್ರಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಗ್ರಾಮೀಣ ಮಹಿಳೆಯರ ಉದ್ಯೋಗಕ್ಕಾಗಿ ತೆರದ ಗಾರ್ಮೆಂಟ್ಸ್ ಮುಚ್ಚಿಸಲು ರಾಜಕೀಯ ಹುನ್ನಾರ




ತುಮಕೂರು:ಗ್ರಾಮೀಣ ಮಹಿಳೆಯರಿಗೆ ಮನೆ ಬಾಗಿಲಿನಲ್ಲಿ ಉದ್ಯೋಗ ಒದಗಿಸಿ,ಅವರ ಅರ್ಥಿಕ ಸ್ವಾವಲಂಬನೆಗೆ ದಾರಿಯಾಗಿರುವ ಪ್ರಿಯಾ ಗಾರ್ಮೆಂಟ್ಸ್ ಬಗ್ಗೆ ಕೆಲವರು ರಾಜಕೀಯ ದುರುದ್ದೇಶದಿಂದ ಸಾಮಾಜಿಕ ಮಾಧ್ಯಮಗಳನ್ನು ಬಳಕೆ ಮಾಡಿಕೊಂಡು,ಕೆಟ್ಟ ಹೆಸರು ತರುವ ಪ್ರಯತ್ನ ನಡೆಸಿದ್ದಾರೆ ಎಂದು ಪ್ರಿಯಾ ಗಾರ್ಮೆಂಟ್ಸ್ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಗೂಳೂರು ಹೋಬಳಿ ಕಾಂಗ್ರೆಸ್ ಮುಖಂಡ ಪಾಲನೇತ್ರಯ್ಯ ತಿಳಿಸಿದ್ದಾರೆ.
ತಮ್ಮ ಗಾರ್ಮೆಂಟ್ಸ್ ಬಗ್ಗೆ ಇತ್ತೀಚಗೆ ಕೆಲ ಸಾಮಾಜಿಕ ಮಾಧ್ಯಮಗಳಲ್ಲಿ ಬಂದ ವರದಿಯ ಹಿನ್ನೆಲೆಯಲ್ಲಿ ಸ್ಪಷ್ಟನೇ ನೀಡಿದ ಅವರು, ನಾನು ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿ. ಬಡ ಕುಟುಂಬದಲ್ಲಿಯೇ ಹುಟ್ಟಿ, ಮಠದ ಓದಿ, ಶ್ರೀಗಳ ಆಶೀರ್ವಾದಿಂದ ವ್ಯಾಪಾರ ವ್ಯವಹಾರ ನಡೆಸುತ್ತಿದ್ದು, ಗ್ರಾಮೀಣ ಭಾಗದ ಮಹಿಳೆಯರು ಉದ್ಯೋಗಕ್ಕಾಗಿ ಬೆಂಗಳೂರಿನಂತಹ ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವ ಸಲುವಾಗಿ ತಲಾ 200 ಜನರಂತೆ ಮೂರು ಪಾಳಿಯಲ್ಲಿ ಕೆಲಸ ಮಾಡಬಹುದಾದ ಪ್ರಿಯಾ ಗಾರ್ಮೆಂಟ್ಸ್ ತೆರೆದು, ಕಳೆದ ಒಂದುವರೆ ವರ್ಷದಿಂದ ಕಾರ್ಯನಿರ್ವಹಿಸುತಿದ್ದೇವೆ ಎಂದರು.
ವ್ಯಾಪಾರ, ವ್ಯವಹಾರ ಎಂದಾಗ ಲಾಭ, ನಷ್ಟ ಸಾಮಾನ್ಯ.ಇದನ್ನೇ ಕೆಲವರು ನೆಪ ಮಾಡಿಕೊಂಡು ನಮ್ಮಲ್ಲಿ ಕೆಲಸ ಮಾಡುತಿದ್ದು, ಕೆಲಸ ತೊರೆದ ಮಾಜಿ ಕಾರ್ಮಿಕರನ್ನೇ ಉಪಯೋಗಿಸಿಕೊಂಡು ವೇತನ ನೀಡಿಲ್ಲ.ಪಿ.ಎಫ್ ಕಟ್ಟಿಲ್ಲ ಇನ್ನಿತರ ಆರೋಪಗಳನ್ನು ಮಾಡಿ, ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡಿಸುವ ಮೂಲಕ ನನ್ನ ಹೆಸರಿಗೆ ಮಸಿ ಬಳಿಯುವ ಕೆಲಸ ಮಾಡಿದ್ದಾರೆ.ಇದರ ಹಿಂದೆ ರಾಜಕೀಯ ಷಡ್ಯಂತ್ರವಿದೆ.ನನ್ನ ವಿರುದ್ದ ಷಡ್ಯಂತ್ರ ರೂಪಿಸಿರುವ ವ್ಯಕ್ತಿಗಳಿಗೆ ನಾನು ಹೇಳ ಬಯಸುವುದು ಇಷ್ಟೇ. ನಿಜವಾಗಿಯೂ ಹೆಣ್ಣು ಮಕ್ಕಳ ಬಗ್ಗೆ ನಿಮಗೆ ಕಾಳಜಿ ಇದ್ದರೆ ನೀವು ಒಂದು ಪ್ಯಾಕ್ಟರಿ ತೆರೆದು, ನಾಲ್ಕಾರು ಜನರಿಗೆ ಕೆಲಸ ನೀಡಿ, ಅದನ್ನು ಬಿಟ್ಟು, ಮನೆ ಬಾಗಿಲಿನಲ್ಲಿಯೇ ಕೆಲಸ ಮಾಡುತ್ತಾ ಬದುಕು ಕಂಡುಕೊಳ್ಳುತ್ತಿರುವ ಮಹಿಳೆಯರನ್ನು ದಾರಿ ತಪಿಸುವ ಕೆಲಸ ಮಾಡಬೇಡಿ ಎಂದು ಪಾಲನೇತ್ರಯ್ಯ ತಿಳಿಸಿದರು.
ಪ್ರಿಯಾ ಗ್ರಾರ್ಮೆಂಟ್ಸ್ನ ಮಾಲೀಕರಾದ ವಿಜಯಕುಮಾರಿ ಮಾತನಾಡಿ,ತುಮಕೂರು ಗ್ರಾಮಾಂತರ ಭಾಗದ ಮಹಿಳೆಯರ ಉದ್ಯೋಗ ಭವಣೆ ನೀಗಿಸುವ ಉದ್ದೇಶದಿಂದ 24 ಕೋಟಿ ಹಣ ಸಾಲ ಮಾಡಿ ಗಾರ್ಮೆಂಟ್ಸ್ ಆರಂಭಿಸಿದ್ದೇವೆ,ಈ ಉದ್ಯಮದ ಬಗ್ಗೆ ನಮಗೆ ಅಷ್ಟೊಂದು ಮಾಹಿತಿ ಇಲ್ಲದ ಕಾರಣ ಇಲ್ಲಿ ಕೆಲಸಕ್ಕೆ ಸೇರಿದ ಹಲವರು ನಮಗೆ ಲಕ್ಷಾಂತರ ರೂ ಮೋಸ ಮಾಡಿದ್ದಾರೆ.ನಾವು ಎದೆಗುಂದದೆ ನಮ್ಮನ್ನು ನಂಬಿ ಬಂದವರಿಗಾಗಿ ಗಾರ್ಮೆಂಟ್ಸ್ ನಡೆಸುತ್ತಿದ್ದೇವೆ,ಎಲ್ಲರಿಗೂ ಬಸ್ ಸೌಲಭ್ಯ ಕಲ್ಪಿಸಿದ್ದೇವೆ,ಮದ್ಯಾಹ್ನದ ವೇಳೆಯಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಕಲ್ಪಿಸಿದ್ದೇವೆ ಯಾವುದಕ್ಕೂ ಹಣ ಪಡೆಯುತ್ತಿಲ್ಲ,ರಾಜಕೀಯ ಹಿನ್ನಲೆಯಿಂದ ಬಂದಿರುವುದು ವಿರೋಧಿಗಳು ಹೆಜ್ಜೆ ಹೆಜ್ಜೆಗೂ ಕಿರುಕುಳ ನೀಡುತ್ತಿದ್ದಾರೆ.ಆದರೂ ಎದೆಗುಂದಿಲ್ಲ,ನಮ್ಮ ಗಾರ್ಮೆಂಟ್ಸ್ ಬಳಿ ಪ್ರತಿಭಟನೆ ಮಾಡಿರುವ ಮಹಿಳೆಯರೂ ಕೂಡ ಇಎಸ್‌ಐ,ಪಿಎಫ್ ಕಟ್ಟಿದರೆ ಕಟ್ಟಿ ಇಲ್ಲವಾದರೆ ಬೇಡ ಸಂಭಳವೂ ಬೇಡ ಎಂದು ಬರೆದುಕೊಟ್ಟು ಹೋಗಿ,ಈಗ ಏಕಾಏಕಿ ಗಲಾಟೆ ಮಾಡುತ್ತಿದ್ದಾರೆ,ನಮ್ಮ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು ನಮ್ಮ ವಿರುದ್ದ ಷಡ್ಯಂತ್ರ ರೂಪಿಸುತ್ತಿದ್ದಾರೆ,ಇಲ್ಲಿಗೆ ಪ್ರತಿಭಟನೆಗೆ ಬಂದಿದ್ದ ಎಲ್ಲಾ ಹೆಣ್ಣು ಮಕ್ಕಳು ಗ್ರಾಮಾಂತರ ಶಾಸಕರ ಬಳಿ ಹೋಗಿದ್ದಾರೆ.ಅವರ ಅಹವಾಲು ಆಲಿಸಿ ನಮಗೆ ದೂರವಾಣಿ ಕರೆ ಮಾಡಿ ಸಮಸ್ಯೆ ಕೇಳಬಹುದಿತ್ತು,ಆ ಹೆಣ್ಣು ಮಕ್ಕಳಂತೆ ನಾನು ಹೆಣ್ಣು ಮಗಳು ಉದ್ಯಮ ನಡೆಸುತ್ತಿದ್ದೇನೆ,ನನ್ನ ಸಮಸ್ಯೆ ಕೇಳಬಹುದಿತ್ತು ನಾನೇನು ಬೇರೆ ದೇಶದಲ್ಲಿ ವಾಸವಾಗಿದ್ದೀನಾ ಎಂದು ಖಾರವಾಗಿ ಪ್ರಶ್ನಿಸಿದರು.
ಗ್ರಾಮಾಂತರ ಪ್ರದೇಶದ ಬಡಮಕ್ಕಳಿಗೆ ಪ್ರಿಯದರ್ಶಿನಿ ಚಾರಿಟಬಲ್ ಟ್ರಸ್ಟ್ ಮೂಲಕ ಸಮವಸ್ತ್ರ ,ಬ್ಯಾಗ್,ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ.ಅದಕ್ಕೂ ಬಿಜೆಪಿಯವರು ಅಡ್ಡಿ ಮಾಡುತ್ತಿದ್ದಾರೆ,ಈಗ ಬಡ ಹೆಣ್ಣು ಮಕ್ಕಳು ಕೆಲಸ ಮಾಡುವ ಗಾರ್ಮೆಂಟ್ಸ್ ಮೇಲೂ ಕಣ್ಣು ಹಾಕಿ ಕಿರುಕುಳ ನೀಡುತ್ತಿದ್ದಾರೆ,ನಾವು ಯಾರಿಗೂ ಮೋಸ ಮಾಡಿಲ್ಲ,ಮೋಸ ಮಾಡುವ ಅವಶ್ಯಕತೆಯೂ ಇಲ್ಲ ಇವೆಲ್ಲಾ ಷಡ್ಯಂತರಗಳು ದುರುದ್ದೇಶಪೂರಿತವಾದವು ಎಂದು ಆಪಾಧಿಸಿದರು.
ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಪ್ರಿಯಾ ಗ್ರಾರ್ಮೆಂಟ್ಸ್ನ ಉದ್ಯೋಗಿಗಳು, ಮಾಲೀಕರು ನಮ್ಮನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಉಚಿತವಾಗಿ ನಮ್ಮ ಮನೆ ಬಾಗಿಲಿಗೆ ವಾಹನ ಕಳುಹಿಸಿ ಕರೆಯಿಸಿಕೊಳ್ಳುತ್ತಾರೆ, ಮಧ್ಯಾಹ್ನ ಊಟ ನೀಡುತ್ತಾರೆ.ಮಾಜಿ ಉದ್ಯೋಗಿಗಳು ಕಮಿಷನ್ ಆಸೆಗೆ ಇಲ್ಲಿ ಕೆಲಸ ಮಾಡುತ್ತಿರುವ ನುರಿತ ಟೈಲರ್‌ಗಳನ್ನು ಇನ್ನೊಂದು ಗ್ರಾರ್ಮೆಂಟ್ಸ್ ಕರೆದುಕೊಂಡು ಹೋಗಲು ಪ್ರಯತ್ನಿಸಿದ್ದರು.ಆದರೆ ಹೆಚ್ಚಿನವರು ಹೋಗದ ಕಾರಣ,ಪ್ಯಾಕ್ಟರಿಗೆ ಕೆಟ್ಟ ಹೆಸರು ತರುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

# ಆಲೋಚನೆ ಬದಲಿಸಿಕೊಳ್ಳಿ ಇದು ಶ್ರೀಮಂತನೊಬ್ಬನ ಕತೆ

.ಆತ ಒಂದು ಶಹರದಲ್ಲಿ ವಾಸವಾಗಿದ್ದ. ಶ್ರೀಮಂತನೆಂದ ಮೇಲೆ ಹಣಕ್ಕೆಲ್ಲಿಯ ಕೊರತೆ? ಇದೇ ವಿಷಯ ಆತನಿಗೆ ಅಹಂಕಾರ ಬರುವಂತೆ ಮಾಡಿತ್ತು. ತಾನು ಏನು ಬೇಕಾದರೂ ಮಾಡಬಲ್ಲೆನೆಂಬ ಅಹಂಕಾರ ಆತನಲ್ಲಿ ಮನೆಮಾಡಿತ್ತು.

ಒಂದು ಬಾರಿ ಆತನ ಕಣ್ಣಿನಲ್ಲಿ ಇನ್‌ಫೆಕ್ಷನ್ ಆಯಿತು. ಬಹಳ ಕಣ್ಣುರಿಯಿಂದ ಬಳಲತೊಡಗಿದ. ವೈದ್ಯರ ಬಳಿ ಹೋದ. ಆದರೆ ಯಾವ ವೈದ್ಯರಿಗೂ ಅದನ್ನು ಗುಣಪಡಿಸಲಾಗಲಿಲ್ಲ. ಆತನ ಬಳಿ ಬಹಳಷ್ಟು ಹಣವಿತ್ತು. ಆತ ದೇಶವಿದೇಶಗಳಿಂದ ಅನೇಕ ವೈದ್ಯರನ್ನು ಕರೆಸಿಕೊಂಡ. ಕೊನೆಗೆ ಒಬ್ಬ ಹಿರಿಯ ವೈದ್ಯರು ಅವನ ರೋಗದ ಲಕ್ಷಣ ಕಂಡುಹಿಡಿದರು. "ನಿಮ್ಮ ಕಣ್ಣಿಗೆ ಅಲರ್ಜಿ ಇದೆ. ನೀವು ಕೆಲವು ದಿನಗಳವರೆಗೆ ಹಸಿರು ಬಣ್ಣವನ್ನು ಮಾತ್ರ ನೋಡುತ್ತಿರಬೇಕು. ಬೇರೆ ಯಾವುದೇ ಬಣ್ಣವನ್ನು ನೋಡಿದರೂ ಕಣ್ಣಿಗೆ ತೊಂದರೆಯಾಗುತ್ತದೆ" ಎಂದು ಎಚ್ಚರಿಕೆ ನೀಡಿದರು. ಇಷ್ಟಾದ ನಂತರ ಏನು ಮಾಡುವುದೆಂದು ಶ್ರೀಮಂತ ಯೋಚಿಸಿದ. ತಕ್ಷಣವೇ ಊರಲ್ಲಿರುವ ದೊಡ್ಡ ದೊಡ್ಡ ಪೇಂಟರ್ ಗಳಿಗೆ ಕರೆ ಕಳುಹಿಸಿದ. ತನ್ನ ಇಡೀ ಬಂಗಲೆಗೆ ಹಸಿರು ಬಣ್ಣ ಬಳಿಯುವಂತೆ ಸೂಚಿಸಿದ. "ನನಗೆ ಹಸಿರು ಬಣ್ಣದ ಹೊರತಾಗಿ ಬೇರೇನೂ ಕಾಣಬಾರದು. ನಾನು ತಿರುಗಾಡುವ ಜಾಗದಲ್ಲೆಲ್ಲ ಇದೇ ಬಣ್ಣ ಹಚ್ಚಿ" ಎಂದು ಹೇಳಿದ. ಈ ಕಾರ್ಯಕ್ಕೆ ಬಹಳಷ್ಟು ಹಣ ಖರ್ಚಾಗತೊಡಗಿತು. ಇಷ್ಟಾದರೂ ಶ್ರೀಮಂತನ ಕಣ್ಣಿಗೆ ಬೇರೆ ಬಣ್ಣ ಕಂಡೇ ಕಾಣುತ್ತಿತ್ತು. ಇಡೀ ಊರಿಗೆ ಬಣ್ಣ ಹಚ್ಚಿಸುವುದು ಸಾಧ್ಯವಿಲ್ಲವಲ್ಲ?

ಒಮ್ಮೆ ಆ ಊರಿನಿಂದ ಒಬ್ಬ ಸಾಧು ಹಾದುಹೋಗುತ್ತಿದ್ದರು. ಅವರು ಸುತ್ತಲೂ ಹಸಿರು ಬಣ್ಣದ ಕಟ್ಟಡಗಳನ್ನು ನೋಡಿದರು. "ಏಕೆ ಈ ರೀತಿ?" ಎಂದು ಊರವರನ್ನು ಕೇಳಿದರು. ವಿಷಯವನ್ನೆಲ್ಲ ತಿಳಿದುಕೊಂಡ ಮೇಲೆ ಅವರು ನೇರವಾಗಿ ಶ್ರೀಮಂತನ ಬಳಿ ತೆರಳಿದರು. "ಅಯ್ಯಾ, ನೀವು ಇಷ್ಟು ಹಣ ಖರ್ಚು ಮಾಡುವ ಅಗತ್ಯವೇ ಇಲ್ಲ. ನಿಮ್ಮ ಸಮಸ್ಯೆಗೆ ನನ್ನ ಬಳಿ ಪರಿಹಾರವಿದೆ. ನೀವು ಒಂದು ಹಸಿರು ಕನ್ನಡಕ ಖರೀದಿಸಿ ಧರಿಸಿಕೊಂಡರೆ ಸಾಕು, ನಿಮಗೆ



ಎಲ್ಲವೂ ಹಸಿರಾಗಿ ಕಾಣುತ್ತದೆ" ಎಂದು ಹೇಳಿದರು. ಶ್ರೀಮಂತ ಬಿಟ್ಟ ಕಣ್ಣು ಬಿಟ್ಟಂತೆ ನೋಡತೊಡಗಿದ. ಅವನ ತಲೆಯಲ್ಲಿ ಈ ವಿಚಾರ ಬಂದಿರಲೇ ಇಲ್ಲ. ಆತ ಸುಖಾಸುಮ್ಮನೆ ಹಣ ಖರ್ಚು ಮಾಡುತ್ತಲೇ ಇದ್ದ. ನಮ್ಮ ಆಲೋಚನೆ ಮತ್ತು ನೋಡುವ ದೃಷ್ಟಿಕೋನಗಳು ಬಹಳಷ್ಟು ವಿಚಾರಗಳ ಮೇಲೆ ಪ್ರಭಾವ ಬೀರುತ್ತವೆ. ಅನೇಕ ಬಾರಿ ಸಮಸ್ಯೆಗಳಿಗೆ ಪರಿಹಾರ ಬಹು ಸುಲಭವಾಗಿರುತ್ತದೆ. ಆದರೆ ನಾವು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿರುತ್ತೇವೆ.

ಶ್ರೀ ರಾಜಾರಾಮ ಮಹಾರಾಜರು, 'ಸದ್ಗುರು ವಾಚೋನಿ ದುಃಖ ತೋಡವಿತಾ, ನ ದಿಸೇ ಪಾಹತಾ ತ್ರಿಭುವನಿ' ಎಂದಿದ್ದಾರೆ. ಅಂದರೆ, ನಮ್ಮೆಲ್ಲ ಸಮಸ್ಯೆಗಳಿಗೆ ಗುರು ಮಾತ್ರ ಸರಳ ಪರಿಹಾರ ಸೂಚಿಸಬಲ್ಲರು ಎಂದು ಬಣ್ಣಿಸಿದ್ದಾರೆ. ನಮಗೆ ಸಮಸ್ಯೆಗಳಿರದ ದಿನಗಳು, ಸಮಸ್ಯೆಯಾಗದ ವಿಚಾರಗಳು ಇರದು. ಎಲ್ಲರದರೊಳಗೂ ಸಮಸ್ಯೆಯನ್ನು ಹುಡುಕುವ ಸೂಕ್ಷ್ಮ ( ಕುರೂಪಿ) ಮನಸ್ಸು ನಮ್ಮದು.

ಸಮಸ್ಯೆಯನ್ನು ನುಂಗುತ್ತೇವೆ; ಯಾರೊಡನೆಯೂ ಹಂಚಿಕೊಳ್ಳುವುದಿಲ್ಲ. ಮನದೊಳಗೆ ಕುದಿಯುವ ಸಮಸ್ಯೆಗಳ ಸಂಖ್ಯೆ ಏರುತ್ತಿರುತ್ತವೆಯೇ ಹೊರತು ಪರಿಹಾರ ಎತ್ತಿನ ಕೋಡಿನಲ್ಲೇ ಇರುತ್ತದೆ. ಮನಸ್ಸಿನೊಳಗೆ ಬೆಳೆಯುವ ಸಮಸ್ಯೆಗಳು ನಮ್ಮ ಹೃದಯ ಸ್ಥಂಬನಕ್ಕೆ ಕಾರಣವಾದರೂ ವಿಶೇಷವಲ್ಲ. ಸಮಸ್ಯೆಗಳಿಗೆ ಆಯಾ ದಿನವೇ ಪರಿಹಾರ ಕಂಡುಕೊಳ್ಳಬೇಕು. ಅದಕ್ಕಾಗಿ ನಮ್ಮ ಸಮಸ್ಯೆಗಳನ್ನು ಇತರರಿಗೆ ಉಣ ಬಡಿಸಬೇಕು, ಅವರು ಗುರುಗಳಿರಬಹುದು, ಗೆಳೆಯರಿರಬಹುದು, ಹೆತ್ತವರು, ಸೋದರ ಸೋದರಿಯರು, ಒಡಹುಟ್ಟಿದವರು... ಹೀಗೆ ಇವರ ಮುಂದೆ ಸಮಸ್ಯೆಯನ್ನು ಮುಕ್ತವಾಗಿಟ್ಟಾಗ ಯಾರಾದರು ಒಬ್ಬರು ಸೂಕ್ತವಾದ ಪರಿಹಾರ ನೀಡಿಯೇ ನೀಡುವರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109






ನಗೆಯು ಬರುತಿದೆ ಎನಗೆ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಿರುವ ಮನುಜರೆಲ್ಲ
ಹಗರಣ ಮಾಡುವುದ ಕಂಡು

ಪರರ ವನಿತೆ ಒಲುಮೆಗೊಲಿದು
ಹರುಷದಿಂದ ಅವಳ ಬೆರೆತು
ಹರಿವ ನೀರಿನೊಳಗೆ ಮುಳುಗಿ
ಬೆರಳ ಎಣಿಸುತಿಹರ ಕಂಡು

ಪತಿಯ ಸೇವೆಯ ಬಿಟ್ಟು
ಪರಪತಿಯ ಕೂಡಿ ಸತತ
ಮೈಯ ತೊಳೆದು ಹಲವು
ವ್ರತವ ಮಾಡ್ವ ಸತಿಯ ಕಂಡು

ಹೀನಗುಣವ ಮನದೊಳಿಟ್ಟು
ತಾನು ವಿಷದ ಹುಂಜನಾಗಿ
ಸ್ವಾಮಿ ಪುರಂದರ ವಿಠ್ಠಲನ
ನಾಮ ನೆನೆಯುವರ ಕಂಡು

ರಚನೆ: ಪುರಂದರ ದಾಸ

# ರಾತ್ರಿಯಲ್ಲಿ ಯೂರಿಕ್ ಆಮ್ಲ ಹೆಚ್ಚಾದಾಗ, ದೇಹದಲ್ಲಿ ಕಾಣಿಸಿಕೊಳ್ಳುವ ರೋಗ ಲಕ್ಷಣಗಳಿವು!

ಯೂರಿಕ್ ಆಮ್ಲವು ನೈಸರ್ಗಿಕವಾಗಿ ಉತ್ಪತ್ತಿಯಾಗುವ ತ್ಯಾಜ್ಯ ಉತ್ಪನ್ನವಾಗಿರುವುದರಿಂದ ದೇಹದಲ್ಲಿ ಯಾವಾಗಲೂ ಸಣ್ಣ ಪ್ರಮಾಣದಲ್ಲಿ ಯೂರಿಕ್ ಆಮ್ಲ ಇರುತ್ತದೆ. ಆದರೆ ಅದರ ಪ್ರಮಾಣ ಹೆಚ್ಚಾಗಲು ಪ್ರಾರಂಭಿಸಿದಾಗ ಅದರಿಂದ ದೇಹದಲ್ಲಿ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

ಇಂದಿನ ಕಾರ್ಯನಿರತ ಜೀವನದಲ್ಲಿ, ನಮ್ಮಲ್ಲಿ ಬಹುತೇಕ ಜನರು ಒಂದಲ್ಲ ಒಂದು ಕಾಯಿಲೆಯಿಂದ ಬಳಲುತ್ತಿದ್ದಾರೆ. ಕೆಟ್ಟ ಆಹಾರ ಪದ್ಧತಿ ಮತ್ತು ಅನಾರೋಗ್ಯಕರ ಜೀವನಶೈಲಿ ಇದಕ್ಕೆ ಕಾರಣ. ಪ್ರಮುಖವಾಗಿ ಇಂದಿನ ದಿನಗಳಲ್ಲಿ ಸಣ್ಣ ವಯಸ್ಸಿಗೆ ಬಿಪಿ–ಶುಗರ್ ಕಾಯಿಲೆಗಳು ಕಾಣಿಸಿಕೊಳ್ಳುವ ವುದರ ಜೊತೆಗೆ ನಮ್ಮಲ್ಲಿ ಹೆಚ್ಚಿನವರು ಯೂರಿಕ್ ಆಮ್ಲದ ಸಮಸ್ಯೆಯಿಂದಲೂ ಕೂಡ ಬಳಲುತ್ತಿದ್ದಾರೆ. ಅದರಲ್ಲೂ ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾದರೆ, ಕೀಲು ನೋವು, ಊತ ಹಾಗೂ ನಡೆಯುವಾಗಲೂ ಕೂಡ ಸಮಸ್ಯೆಯನ್ನು ಎದುರಿಸುತ್ತಾರೆ.

## ಹಾಗಾದ್ರೆ ಈ ಯೂರಿಕ್ ಆಮ್ಲ ಎಂದರೇನು?

ಪ್ಯೂರಿನ್ ಎಂಬುದು ಕೆಲವು ರೀತಿಯ ಆಹಾರ ಪದಾರ್ಥಗಳಲ್ಲಿ ಕಂಡುಬರುವ ರಾಸಾಯನಿಕ ಸಂಯುಕ್ತವಾಗಿದೆ. ನಮ್ಮ ದೇಹವು ಈ ಪ್ಯೂರಿನ್ ಅನ್ನು ಜೀರ್ಣಿಸಿಕೊಂಡಾಗ, ಯೂರಿಕ್ ಆಮ್ಲವು ರೂಪು ಗೊಳ್ಳುತ್ತದೆ.

ಸಾಮಾನ್ಯವಾಗಿ ಮೂತ್ರಪಿಂಡವು ಮೂತ್ರದ ಮೂಲಕ ಯೂರಿಕ್ ಆಮ್ಲವನ್ನು ಹೊರಹಾಕುತ್ತದೆ, ಆದರೆ ದೇಹದಲ್ಲಿ ಅದರ ಪ್ರಮಾಣವು ತುಂಬಾ ಹೆಚ್ಚಾದಾಗ, ಅದನ್ನು ಹೊರಹಾಕಲು ಸಾಧ್ಯವಿಲ್ಲ. ಇದು ಹೆಚ್ಚಿನ ಯೂರಿಕ್ ಆಮ್ಲದ ಸಮಸ್ಯೆಗೆ ಕಾರಣ ವಾಗುತ್ತದೆ.

ಒಂದು ವೇಳೆ ದೇಹದಲ್ಲಿ ಯೂರಿಕ್ ಆಮ್ಲದ ಪ್ರಮಾಣ ಹೆಚ್ಚಾಗಿ ಬಿಟ್ಟರೆ, ಕೆಲವು ನಿರ್ದಿಷ್ಟ ಲಕ್ಷಣಗಳು ರಾತ್ರಿಯಲ್ಲಿ ಅಥವಾ ಬೆಳಗ್ಗೆ ಎದ್ದಾಗ ಹೆಚ್ಚು ತೊಂದರೆ ನೀಡುತ್ತವೆ. ರಾತ್ರಿಯಲ್ಲಿ ಕಂಡುಬರುವ ಅದರ ಲಕ್ಷಣಗಳನ್ನು (ಹೈ ಯೂರಿಕ್ ಆಮ್ಲ ಲಕ್ಷಣಗಳು ರಾತ್ರಿ ಯಲ್ಲಿ) ನಿರ್ಲಕ್ಷಿಸಬಾರದು. ಯೂರಿಕ್ ಆಮ್ಲ ಹೆಚ್ಚಾದಾಗ ರಾತ್ರಿಯಲ್ಲಿ ಯಾವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎಂಬುದನ್ನು ಇಂದಿನ ಲೇಖನದಲ್ಲಿ ನೋಡುತ್ತಾ ಹೋಗೋಣ

## ರಾತ್ರಿಯಲ್ಲಿ ತೀವ್ರ ಕೀಲು ನೋವು

ದೇಹದಲ್ಲಿ ಯೂರಿಕ್ ಆಮ್ಲದ ಹೆಚ್ಚಾಗಿರುವ ಸಾಮಾನ್ಯ ಲಕ್ಷಣ ವಾಗಿದೆ, ಇದು ಹೆಚ್ಚಾಗಿ ರಾತ್ರಿಯಲ್ಲಿ ಹದಗೆಡುತ್ತದೆ. ಯೂರಿಕ್ ಆಮ್ಲದ ಮಟ್ಟ ಹೆಚ್ಚಾದಾಗ, ಅದು ದೇಹದ ಕೀಲುಗಳಲ್ಲಿ ಹರಳುಗಳ ರೂಪದಲ್ಲಿ ಸಂಗ್ರಹವಾಗುತ್ತದೆ.

ಉದಾಹರಣೆಗೆ ಕಾಲ್ಬೆರಳುಗಳು (ಹಿಮ್ಮಡಿಗಳು, ಕಣಕಾಲುಗಳು, ಮೊಣಕಾಲುಗಳು). ಇದು ಕೀಲುಗಳಲ್ಲಿ ಹಠಾತ್ ತೀಕ್ಷ್ಣ ವಾದ, ಇರಿತದ ನೋವನ್ನು ಉಂಟುಮಾಡುತ್ತದೆ. ಈ ನೋವು ಎಷ್ಟು ತೀವ್ರವಾಗಿರುತ್ತದೆಯೆಂದರೆ ಅದು ನಿಮ್ಮ ನಿದ್ರೆಯನ್ನು ಹಾಳು ಮಾಡುತ್ತದೆ ಮತ್ತು ಬೆಡ್‌ಶೀಟ್‌ನ ಸಣ್ಣ ಸ್ಪರ್ಶ ಕೂಡ ಅಸಹನೀ ಯವೆನಿಸಬಹುದು.

## ಪದೇ ಪದೇ ಮೂತ್ರ ವಿಸರ್ಜನೆ

ಹೆಚ್ಚಿನ ಯೂರಿಕ್ ಆಮ್ಲವು ಮೂತ್ರಪಿಂಡಗಳಿಗೆ ನೇರವಾಗಿ ಸಂಬಂಧಿಸಿದೆ. ಯೂರಿಕ್ ಆಮ್ಲದ ಮಟ್ಟವು ತುಂಬಾ ಹೆಚ್ಚಾದಾಗ, ಮೂತ್ರಪಿಂಡಗಳ ಮೇಲೆ ಹೆಚ್ಚುವರಿ ಒತ್ತಡ ಉಂಟಾಗುತ್ತದೆ. ಅದು ಅದನ್ನು ಫಿಲ್ಟರ್ ಮಾಡಿ ದೇಹದಿಂದ ತೆಗೆದುಹಾಕಲು ಪ್ರಯತ್ನಿಸು ತ್ತಲೇ ಇರುತ್ತದೆ.

ಈ ಕಾರಣದಿಂದಾಗಿ, ರಾತ್ರಿಯಲ್ಲಿ ಪದೇ ಪದೇ ಮೂತ್ರ ವಿಸರ್ಜಿಸಲು ಅವಸರವಾಗುತ್ತದೆ ಅಲ್ಲದೆ ಈ ಸಮಯದಲ್ಲಿ ಮೂತ್ರದ ಪ್ರಮಾಣ ಕಡಿಮೆಯಾಗಿರಬಹುದು, ಆದರೆ ಮೂತ್ರಕೋಶವು ಸಂಪೂರ್ಣ ವಾಗಿ ಖಾಲಿಯಾಗಿಲ್ಲ ಎಂಬ ಭಾವನೆ ಇರುತ್ತದೆ.

ನಿಮಗೆ ಗೊತ್ತಿರಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾದಾಗ, ಮೂತ್ರ ಪಿಂಡಗಳು ಅದನ್ನು ಸಂಪೂರ್ಣವಾಗಿ ಫಿಲ್ಟರ್ ಮಾಡಲು ಸಾಧ್ಯ ವಾಗುವುದಿಲ್ಲ, ಇದರಿಂದಾಗಿ ಅದು ಮೂತ್ರನಾಳದಲ್ಲಿ ಹರಳುಗಳ ರೂಪದಲ್ಲಿ ಸಂಗ್ರಹವಾಗಬಹುದು.

ಇದು ನೋವು, ಸುಡುವ ಸಂವೇದನೆ ಅಥವಾ ಮೂತ್ರ ವಿಸರ್ಜನೆಯ ಸಮಯದಲ್ಲಿ ಆಗಾಗ್ಗೆ ಮೂತ್ರ ಕಾಣಿಸಿಕೊಳ್ಳುತ್ತದೆ.




ವಿಸರ್ಜನೆಗೆ ಕಾರಣವಾಗಬಹುದು. ಕೆಲವೊಮ್ಮೆ ಹೆಚ್ಚಿದ ಯೂರಿಕ್ ಆಮ್ಲವು ಮೂತ್ರಪಿಂಡದ ಕಲ್ಲು ಗಳಿಗೆ ಕಾರಣವಾಗಬಹುದು, ಇದು ತೀವ್ರ ನೋವನ್ನು ಉಂಟು ಮಾಡುತ್ತದೆ.

## ರಾತ್ರಿಯಲ್ಲಿ ಬೆವರುವುದು ಮತ್ತು ಚಡಪಡಿಕೆ

ದೇಹದಲ್ಲಿ ಉರಿಯೂತ ಮತ್ತು ನಿರಂತರ ನೋವು ದೇಹದ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಈ ಕಾರಣದಿಂದಾಗಿ, ಅನೇಕ ಜನರು ರಾತ್ರಿಯಲ್ಲಿ ಅತಿಯಾಗಿ ಬೆವರು ಮಾಡಬಹುದು ಅಥವಾ ಯಾವುದೇ ನಿರ್ದಿಷ್ಟ ಕಾರಣವಿಲ್ಲದೆ ಚಡಪಡಿಕೆ ಮತ್ತು ಅನಾನುಕೂಲತೆಯನ್ನು ಅನುಭವಿಸಬಹುದು.

## ಚರ್ಮದ ದದ್ದುಗಳು ಅಥವಾ ತುರಿಕೆ

ಕೆಲವು ಸಂದರ್ಭಗಳಲ್ಲಿ, ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾಗಿ ಬಿಟ್ಟರೆ ಚರ್ಮದಲ್ಲಿ ದದ್ದುಗಳು ಅಥವಾ ತುರಿಕೆಗೆ ಕಾರಣವಾಗ ಬಹುದು. ಯೂರಿಕ್ ಆಮ್ಲದ ಹರಳುಗಳು ಚರ್ಮದ ಅಡಿಯಲ್ಲಿ ಸಂಗ್ರಹವಾದಾಗ ಈ ಸಮಸ್ಯೆ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಬೆರಳುಗಳು, ಕಿವಿಗಳು ಅಥವಾ ಮೊಣಕೈಗಳ ಸುತ್ತಲೂ ಕಾಣಿಸಿಕೊಳ್ಳುತ್ತದೆ.

## ಹಾಗಾದ್ರೆ ಇದಕ್ಕೆ ಪರಿಹಾರಗಳೇನು?

ಸರಿಯಾಗಿ ನೀರು ಕುಡಿಯಿರಿ: ಮೊದಲ ಮತ್ತು ಸುಲಭವಾದ ಮಾರ್ಗ ವೆಂದರೆ ಸಾಕಷ್ಟು ನೀರು ಕುಡಿಯುವುದು. ಮೂತ್ರಪಿಂಡಗಳು ದೇಹದಿಂದ ವಿಷ ಮತ್ತು ಹೆಚ್ಚುವರಿ ಯೂರಿಕ್ ಆಮ್ಲವನ್ನು ತೆಗೆದು ಹಾಕಲು ನೀರು ಸಹಾಯ ಮಾಡುತ್ತದೆ. ನೀವು ಸಾಕಷ್ಟು ನೀರು ಕುಡಿದಾಗ, ಮೂತ್ರ ಪಿಂಡಗಳು ಯೂರಿಕ್ ಆಮ್ಲವನ್ನು ಸುಲಭವಾಗಿ ಫಿಲ್ಟರ್ ಮಾಡಿ ಮೂತ್ರದ ಮೂಲಕ ದೇಹದಿಂದ ಹೊರಹಾಕುತ್ತವೆ.

## ಆಹಾರಪದ್ಧತಿ ಹೀಗಿರಲಿ

ಪ್ಯೂರಿನ್ ಭರಿತ ಆಹಾರಗಳನ್ನು ಕಡಿಮೆ ಸೇವಿಸಿ: ಕೆಂಪು ಮಾಂಸ, ಸಮುದ್ರಾಹಾರ, ಆರ್ಗನ್ ಮಾಂಸ ಮತ್ತು ಕೆಲವು ರೀತಿಯ ದ್ವಿದಳ ಧಾನ್ಯಗಳನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಿ.

**ಹಣ್ಣುಗಳು ಮತ್ತು ತರಕಾರಿಗಳನ್ನು ಹೆಚ್ಚಿಸಿ:** ಚೆರ್ರಿಗಳು, ಹಣ್ಣು ಗಳು, ಸೇಬುಗಳು, ಬಾಳೆಹಣ್ಣುಗಳು ಮತ್ತು ಸಿಟ್ರಸ್ ಹಣ್ಣುಗಳು ಯೂರಿಕ್ ಆಮ್ಲವನ್ನು ಕಡಿಮೆ ಮಾಡಲು ಸಹಾಯಕವಾಗಿವೆ. ಪಾಲಕ್, ಬ್ರೊಕೊಲಿ ಮತ್ತು ಬೆಲ್ ಪೆಪ್ಪರ್‌ಗಳಂತಹ ತರಕಾರಿಗಳು ಸಹ ಪ್ರಯೋಜನಕಾರಿ.

**ವಿಟಮಿನ್ ಸಿ ಪ್ರಮಾಣವನ್ನು ಹೆಚ್ಚಿಸಿ:**
ವಿಟಮಿನ್ ಸಿ ಮೂತ್ರ ಪಿಂಡಗಳ ಮೂಲಕ ಯೂರಿಕ್ ಆಮ್ಲವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ನಿಮ್ಮ ಆಹಾರದಲ್ಲಿ ಕಿತ್ತಳೆ, ಕಿವಿ, ಆಮ್ಲಾ ಮತ್ತು ಸೀಬೆಹಣ್ಣನ್ನು ಸೇರಿಸಿ

## ಆಲ್ಕೋಹಾಲ್ ಮತ್ತು ಸಿಹಿ ಪಾನೀಯಗಳಿಂದ ದೂರವಿರಿ

ಮದ್ಯ ಮತ್ತು ಹೆಚ್ಚಿನ ಫ್ರಕ್ಟೋಸ್ ಕಾರ್ನ್ ಸಿರಪ್ ಹೊಂದಿರುವ ಪಾನೀಯಗಳು, ಉದಾಹರಣೆಗೆ ತಂಪು ಪಾನೀಯಗಳು ಮತ್ತು ಪ್ಯಾಕ್ ಮಾಡಿದ ಜ್ಯೂಸ್‌ಗಳು, ದೇಹದಲ್ಲಿ ಯೂರಿಕ್ ಆಮ್ಲದ ಉತ್ಪಾದನೆ ಯನ್ನು ಹೆಚ್ಚಿಸುತ್ತವೆ ಮತ್ತು ಅದನ್ನು ಹೊರಹಾಕುವ ಪ್ರಕ್ರಿಯೆ ಯನ್ನು ತಡೆಯುತ್ತವೆ.

ಆದ್ದರಿಂದ, ಬಿಯರ್ ಮತ್ತು ಇತರ ಆಲ್ಕೊಹಾಲ್ಯುಕ್ತ ಪಾನೀಯ ಗಳನ್ನು ಕಡಿಮೆ ಮಾಡಿ ಅಥವಾ ನಿಲ್ಲಿಸಿ. ತಂಪು ಪಾನೀಯಗಳು ಮತ್ತು ಪ್ಯಾಕ್ ಮಾಡಿದ ಜ್ಯೂಸ್‌ಗಳ ಬದಲಿಗೆ, ತಾಜಾ ಹಣ್ಣಿನ ರಸ, ಮಜ್ಜಿಗೆ ಅಥವಾ ನಿಂಬೆ ಪಾನಕವನ್ನು ಕುಡಿಯಿರಿ.

## ವ್ಯಾಯಾಮ ಮಾಡಿ ಮತ್ತು ದೇಹದ ತೂಕವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿ

ಬೊಜ್ಜು ಯೂರಿಕ್ ಆಮ್ಲದ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಅಧಿಕ ತೂಕವು ದೇಹದಲ್ಲಿ ಇನ್ಸುಲಿನ್ ಪ್ರತಿರೋಧವನ್ನು ಹೆಚ್ಚಿಸುತ್ತದೆ, ಇದು ಯೂರಿಕ್ ಆಮ್ಲದ ವಿಸರ್ಜನೆಗೆ ಅಡ್ಡಿಯಾಗುತ್ತದೆ. ಅಲ್ಲದೆ, ನಿಯಮಿತ ವ್ಯಾಯಾಮವು ದೇಹದ ಚಯಾಪಚಯ ಕ್ರಿಯೆಯನ್ನು ಆರೋಗ್ಯಕರವಾಗಿ ರಿಸುತ್ತದೆ.ಆದ್ದರಿಂದ, ನಿಮ್ಮ ತೂಕವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿ. ಚುರುಕಾದ ನಡಿಗೆ, ಈಜು, ಸೈಕ್ಲಿಂಗ್ ಮತ್ತು ಓಡುವುದಂತಹ ವ್ಯಾಯಾಮ ಗಳನ್ನು ಮಾಡಿ. ಒಮ್ಮೆಲೇ ಭಾರೀ ವ್ಯಾಯಾಮಗಳನ್ನು ಮಾಡಬೇಡಿ ಎಂಬುದನ್ನು ನೆನಪಿನಲ್ಲಿಡಿ

# ಶೋಷಿತರ ಮೇಲೆ ನಡೆಯುವ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ಲ್ಯಾಂಡ್‌ಲಾರ್ಡ್



ಈ ದೇಶದ ಕೂಲಿ ಕಾರ್ಮಿಕರ,ಅಸ್ಪೃಶ್ಯರ ನೋವಿನ ಕಥೆಯನ್ನು, ಅನಿಷ್ಟ ಪದ್ಧತಿಗಳ ಆಚರಣೆ, ಮೂಢನಂಬಿಕೆಗಳ ಪಾಲನೆ, ಜಮೀನ್ದಾರರ ದರ್ಬಾರ್, ಕೆಳ ಜಾತಿಗಳ ಮೇಲೆ ನಡೆಸುವ ದೌರ್ಜನ್ಯಗಳನ್ನು ಎಳೆ ಎಳೆಯಾಗಿ ತೋರಿಸಲಾಗಿದೆ. ಹಾಗೆ ರಾಜಕಾರಣಿಗಳ ಮುಖವಾಡ, ಉಳ್ಳವರ ಪರ ಪೊಲೀಸರ ನಡೆ, ನಮ್ಮವರೇ ನಮ್ಗೆ ಹೊಂಚುಹಾಕುವುದು ಬಹಳ ಅದ್ಭುತವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ಕಟ್ಟಿಕೊಟ್ಟಿದ್ದಾರೆ.

ಎಲ್ಲಕ್ಕಿಂತ ಪ್ರಮುಖವಾಗಿ ಶಿಕ್ಷಣದ ಮಹತ್ವ, ಸಂವಿಧಾನದ ಮಹತ್ವ ಅಥವಾ ಕಾನೂನಿನ ಮಹತ್ವ ಪ್ರತಿಯೊಬ್ಬರಿಗೂ ಮನಸ್ಸಿನಾಳದಲ್ಲಿ ಅಚ್ಚಳಿಯಾಗಿ ಉಳಿಯುವಂತೆ ಹಾಗೆ ಅದರ ಶಕ್ತಿಯನ್ನು ಸಾಮರ್ಥ್ಯವನ್ನು ಅಚ್ಚುಕಟ್ಟಾಗಿ ಪ್ರತಿಯೊಂದನ್ನು ಪ್ರತಿಯೊಂದಕ್ಕೂ ಉದಾರಣೆಯಾಗಿ ಸಂವಿಧಾನ ಹೇಗೆಲ್ಲಾ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದ್ದಾರೆ.

ಕೆಲವೊಂದು ಕಡೆ ಆ ಕ್ಷಣ ಕಣ್ಣೀರು ತರಿಸುವಷ್ಟು ಸನ್ನಿವೇಶಗಳು/ ದೃಶ್ಯಗಳು ಇವೆ.ಅವುಗಳು ಸುಮ್ನೆಯಲ್ಲ ನೋವಿನ ಕಥೆಯನ್ನು ಹಾಗೂ ಏನೂ ಮಾಡದ ಪರಿಸ್ಥಿತಿ ಸೃಷ್ಟಿಯನ್ನು ತೋರಿಸುತ್ತದೆ.ಹಿಂದಿನಿಗಿಂತ ನಾವೇ ಪುಣ್ಯವಂತರು ಅನಿಸಿಬಿಡುತ್ತದೆ.

ಮನುಸ್ಮೃತಿ ಉಳ್ಳವರ ಮತ್ತು ಮೇಲ್ವರ್ಗದವರ ಪರವಾದರೆ ಸಂವಿಧಾನ ಈ ದೇಶದ ಕಟ್ಟಕಡೆಯ ವ್ಯಕ್ತಿಯ ಪರವಾಗಿದೆ ಎಂಬುದನ್ನು ಬಹಳ ಸರಳವಾಗಿ ಈ ಸಿನಿಮಾ ಮೂಲಕ ಅರ್ಥ ಮಾಡಿಸಿದ್ದಾರೆ. ದುನಿಯಾ ವಿಜಯ್ ,ರಚಿತರಾಮ್, ಉಮಾಶ್ರೀ, ರಾಜ್ ಬಿ ಶೆಟ್ಟಿ ಸೇರಿದಂತೆ ಎಲ್ಲರೂ ಬಹಳ ಅದ್ಭುತವಾಗಿ ನಟಿಸಿದ್ದಾರೆ.

ಕೊನೆಯದಾಗಿ ಒಂದೇ ಸಾಲಿನಲ್ಲಿ ಹೇಳಬೇಕಾದರೆ "ಸಂವಿಧಾನ ಸೂರ್ಯನಂತೆ ಹೊಳೆಯುತ್ತಿದ್ದರೆ ಮನುಸ್ಮೃತಿ ಅದರ ಶಾಖಕ್ಕೆ ಸುಟ್ಟೋಗುತ್ತಿದೆ".ಕುಟುಂಬ ಸಮೇತ ಪ್ರತಿಯೊಬ್ಬರು ನೋಡುವಂತ ಸಿನಿಮಾ. ಎಲ್ಲರೂ ನೋಡಿ ನಮ್ಮ ತಂದೆ,ತಾತ,ಮುತ್ತಾತವರು ಮತ್ತು ಮಹಿಳೆಯರು ಮತ್ತು ನಾವು ಅನುಭವಿಸಿದ ಕೆಲವೊಂದು ನೋವಿನ ಸಂಗತಿಗಳನ್ನು ನೋಡಬಹುದಾಗಿದೆ.

ಲ್ಯಾಂಡ್ ಲಾರ್ಡ್ ಎನ್ನುವ ಈ ನೆಲದ ಕಥೆಯನ್ನು ಒಪ್ಪಿಕೊಂಡಿರುವ ಹಾಗೂ ರಚಿಸಿರುವ ದುನಿಯಾ ವಿಜಯ್ ಅವರಿಗೆ ಹಾಗೂ ಜಡೇಶ್ ಹಂಪಿ ಅವರಿಗೂ ಹೃದಯಪೂರ್ವಕ ಧನ್ಯವಾದಗಳು..... ಯಾಕೆಂದರೆ ಇಂತಹ ಗಟ್ಟಿಯಾದ ಕಥೆಯನ್ನು ತೆಗೆಯಲು ಎದೆಯೊಳಗೆ ಗುಂಡಿಗೆಯೂ ಗಟ್ಟಿಯಾಗಿರಬೇಕು ಎಂದು ಚಂದನವನದಲ್ಲಿ ಗುಸು ಗುಸು ಸುದ್ದಿಯಿದೆ

**ಲ್ಯಾಂಡ್ ಲಾರ್ಡ್ ಅವಧಿ:** 2 ಘಂಟೆ 36 ನಿಮಿಷಗಳು

**ತಾರಾಗಣ:** ದುನಿಯಾ ವಿಜಯ, ರಚಿತಾ ರಾಮ್, ರಾಜ್ ಬಿ ಶೆಟ್ಟಿ, ರಿತನ್ಯ, ರಾಕೇಶ್ ಅಡಿಗ,ಉಮಾಶ್ರೀ

**ನಿರ್ದೇಶಕರು:** ಜಡೇಶ್




ಲ್ಯಾಂಡ್ ಲಾರ್ಡ್ ಹೆಸರಿನಲ್ಲಿಯೇ ಕಥೆಯ ಸುಳಿಹು ಅಡಗಿದೆ. ಜಮೀನುದಾರರ ದಬ್ಬಾಳಿಕೆ, ದಮನಿತರ ಬದುಕು, ಶೋಷಣೆ ಮತ್ತು ಕ್ರಾಂತಿ ಸಿನಿಮಾದ ಮುಖ್ಯ ದ್ರವ್ಯಗಳು. ಸಿನಿಮಾ ಹೇಗಿದೆ?

ಸಿನಿಮಾಕ್ಕೆ ಬರವಣಿಗೆ ಎಷ್ಟು ಮುಖ್ಯವೋ ಆ ಕಥೆಯ ಪಾತ್ರಗಳಿಗೆ ನ್ಯಾಯ ದೊರಕಿಸುವುದು ಅಷ್ಟೇ ಮುಖ್ಯ. ದುನಿಯಾ ವಿಜಯ್ ಅವರಂತಹ ಸ್ಟಾರ್ ಯಾವುದೇ ಬಿಲ್ಡ್ ಅಪ್ ಇಲ್ಲದೆ ಕಥೆ ಚಿತ್ರಕತೆಗೆ ಮನ್ನಣೆ ಕೊಟ್ಟಿರುವುದು ಖುಷಿಯ ಸಂಗತಿ. ಹಾಗಾಗಿಯೇ ಸಿನಿಮಾ ಕತೆಯಾಚೆ ಹೋಗದೇ ನಮ್ಮನ್ನೇ ಒಳಕ್ಕೆ ಸೆಳೆದುಕೊಳ್ಳುತ್ತದೆ. ಹೀರೋಯಿಸ್ಮ್ ತೋರಿಸುವ ಡೈಲಾಗ್ ಪಂಚ್ ಬದಲಿಗೆ ಇಲ್ಲಿ ಸತ್ವಯುತವಾದ ಮತ್ತು ಅಷ್ಟೇ ಕಿಕ್ ಕೊಡುವ ಸಂಭಾಷಣೆಗಳಿವೆ. ಚಿತ್ರಕತೆ ಶರವೇಗದಲ್ಲಿ ಓಡುತ್ತದೆ. ಆ ನಿಟ್ಟಿನಲ್ಲಿ ನಿರ್ದೇಶಕರ ಬರಹಗಾರರ ತಂಡದ ಕೆಲಸ ಮೆಚ್ಚುವಂಥದ್ದು.

ಅಭಿನಯದ ವಿಷಯಕ್ಕೆ ಬಂದರೇ ದುನಿಯಾ ವಿಜಯ್ ಸೂಪರ್. ರಚಿತಾ ರಾಮ್, ರಿತನ್ಯ, ರಾಕೇಶ್ ಅಡಿಗ, ಎಲ್ಲರದ್ದೂ ಸೂಪರ್ ಎನಿಸುವ ಅಭಿನಯ. ರಾಜ್ ಬಿ ಶೆಟ್ಟಿ ಖಳನಾಯಕನಾಗಿ ಅಬ್ಬರಿಸಿದ್ದಾರೆ. ಉತ್ತಮವಾದ ಪಾತ್ರಪೋಷಣೆ ಚಿತ್ರದ ಹೈ ಲೈಟ್.

ತಾಂತ್ರಿಕವಾಗಿ ಸಿನಿಮಾ ತುಂಬಾ ಚೆನ್ನಾಗಿದೆ. ಕಲಾ ನಿರ್ದೇಶನ, ಸಂಕಲನ, ಹಿನ್ನೆಲೆ ಸಂಗೀತ ಮತ್ತು ಸಾಹಸ ಸಂಯೋಜನೆ ಎಲ್ಲವೂ ಸಿನಿಮಾಕ್ಕೆ ಮತ್ತಷ್ಟು ಮೆರುಗು ಕೊಡುವಂತಿದೆ.

ಸಂವಿಧಾನ ಮತ್ತು ಸಮಾನತೆ ಎಲ್ಲೆಡೆ ಜಾರಿಯಾಗಲೇ ಬೇಕು ಎನ್ನುವ ಆಶಯವಿರುವ ಈ ಸಿನಿಮಾ ಪಕ್ಕಾ ಕಮರ್ಷಿಯಲ್ ನೆಲಗಟ್ಟಿನಲ್ಲೇ ಸಾಗುತ್ತದೆ. ಹಾಗಾಗಿ ಬೋರ್ ಹೊಡೆಸದೆ ರಂಜಿಸುತ್ತಾ ಸಮಾಜಕ್ಕೆ ಉತ್ತಮ ಸಂದೇಶ ಸಾರುತ್ತಾ ಸಾಗುತ್ತದೆ. ಆ ನಿಟ್ಟಿನಲ್ಲಿ ನಿರ್ದೇಶಕರು ಮೆಚ್ಚುಗೆಗೆ ಪಾತ್ರವಾಗುತ್ತಾರೆ.

# ರಾಮನಗರ ಸುದ್ದಿ ಕಾರ್ನರ್

## ಸಾಮೂಹಿಕ ಗಜಗೌರಿ ವ್ರತಾಚರಣೆ, ಧಾರ್ಮಿಕ ಕಾರ್ಯ ಆರಂಭ



ರಾಮನಗರ: ನಗರದ ಅಗ್ರಹಾರದ ವ್ಯಾಸರಾಯರ ರಸ್ತೆಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯ ನಿರ್ಮಾಣಕ್ಕಾಗಿ ಉದ್ದೇಶಿಸಿರುವ ಭೂಮಿಯಲ್ಲಿ ಗುರುವಾರ ವಿವಿಧ ಧಾರ್ಮಿಕ ಕೈಂಕರ್ಯಗಳು ಆರಂಭಗೊಂಡಿದ್ದು, ಶುಕ್ರವಾರ ಇಲ್ಲಿ ಶ್ರೀ ಗಜಗೌರಿ ಸಾಮೂಹಿಕ ವ್ರತಾಚರಣೆ ಹಿನ್ನೆಲೆಯಲ್ಲಿ ಧಾರ್ಮಿಕ ಪೂಜಾ ಕಾರ್ಯ ನೆರವೇರಿತು.

ಸಂಜೆಯಿಂದಲೇ ಧಾರ್ಮಿಕ ಕೈಂಕರ್ಯಗಳು ಆರಂಭವಾದವು. ಗಂಗಾ ಪೂಜೆ, ಗೋಪೂಜೆ, ಗಣಪತಿ ಪೂಜೆ, ಪುಣ್ಯಾಹ, ಮಹಾಸಂಕಲ್ಪ, ಕಂಕಣ ಬಂಧನ, ಅಂಕುರಾರ್ಪಣೆ, ಕಳಸ ಸ್ಥಾಪನೆ, ವಾಸ್ತು ಹೋಮ, ರಕ್ಷೋಘ್ನ ಹೋಮ, ದಿಗ್ಬಲಿ ಪೂಜೆ, ಪೂರ್ಣಾಹುತಿ ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಜರುಗಿದವು.ಬೆಳಿಗ್ಗೆ ಗಣಪತಿ ಹೋಮ, ನವಗ್ರಹ ಹೋಮ, ರುದ್ರಾಭಿಷೇಕ, ರುದ್ರ ಹೋಮ, ಮೃತ್ಯುಂಜಯ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಿತು. ಸಂಜೆ ಆಶ್ಲೇಷ ಬಳಿ ಪೂಜೆ ನೆರವೇರಿ, ಮಹಾಮಂಗಳಾರತಿ ಕಾರ್ಯಕ್ರಮಗಳು ನೆರವೇರಿದವು.

ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಯವರು ಪೂಜಾ ಕೈಂಕರ್ಯವನ್ನು ನಡೆಸಿಕೊಟ್ಟರು.ಗಜಗೌರಿ ಸಾಮೂಹಿಕ ಪೂಜೆ ನಡೆಯಲಿದೆ. 108 ದಂಪತಿಗಳು ಈ ಪೂಜಾ ಕೈಂಕರ್ಯದಲ್ಲಿ ಭಾಗವಹಿಸಲಿದ್ದಾರೆ ಎಂದು ಶ್ರೀ ಸೀತರಾಮ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ತಿಳಿಸಿದ್ದಾರೆ. ಗಜಗೌರಿ ವ್ರತಾಚರಣೆ ಹಿನ್ನೆಲೆಯಲ್ಲಿ ಬೃಹತ್ ಪೆಂಡಾಲ್ ಅಳವಡಿಸಲಾಗಿದೆ.

ಲೋಕಕಲ್ಯಾಣಾರ್ಥ ಶ್ರೀ ಸೀತಾರಾಮ ಸೇವಾ ಟ್ರಸ್ಟ್, ಶ್ರೀ ಬಲಮುತಿ ಗಣಪತಿ ದೇವಸ್ಥಾನ ಟ್ರಸ್ಟ್ ಮತ್ತು ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಮಂಡಳಿಗಳು ಸಾರ್ವಜನಿಕರ ಸಹಕಾರದಲ್ಲಿ ಈ ಕೈಂಕರ್ಯವನ್ನು ಹಮ್ಮಿಕೊಂಡಿದೆ. ಶಾಸಕ ಇಕ್ಬಾಲ್ ಹುಸೇನ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಸೇರಿದಂತ ವಿವಿಧ ಸಂಘ–ಸಂಸ್ಥೆಗಳು ಸಹಕಾರ ನೀಡುತ್ತಿದ್ದಾರೆ.

ಸಣ್ ಸುದ್ದಿ

## ಸಂದರ್ಶಕರ ಮಂಡಳಿ ಸಭೆ ಸಂಪನ್ನ



ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಕಾರಾಗೃಹದಲ್ಲಿ ಜಿಲ್ಲಾಧಿಕಾರಿಗಳಾದ ಯಶವಂತ್ ವಿ. ಗುರುಕರ್ ಅವರ ಅಧ್ಯಕ್ಷತೆಯಲ್ಲಿ ಸಂದರ್ಶಕರ ಮಂಡಳಿ ಸಭೆ ನೆಡೆಸಲಾಯಿತು.ಕಾರಾಗೃಹದ ಮೂಲಭೂತ ಸೌಕರ್ಯಗಳ ಕುರಿತು ವೀಕ್ಷಿಸಿ, ಬಂದಿಗಳ ಕಂದುಕೊರತೆಗಳು, ಕಾರಾಗೃಹದಲ್ಲಿ ಕಾಪಾಡಲಾದ ಸ್ವಚ್ಚತೆ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಚರ್ಚಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ.ಆರ್. ಅವರು ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಅಧಿಕಾರೇತರ ಸದಸ್ಯರು ಭಾಗವಹಿಸಿದ್ದರು.

## 9 ರಿಂದ 13ರವರೆಗೆ ಆರ್ಥಿಕ ಸಾಕ್ಷರತಾ ಸಪ್ತಾಹ



ರಾಮನಗರ, : ಸಾರ್ವಜನಿಕರಲ್ಲಿ ಬ್ಯಾಂಕಿಂಗ್ ವ್ಯವಹಾರ ಹಾಗೂ ಆರ್ಥಿಕ ಶಿಸ್ತಿನ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಇದೇ ಫೆ. 9 ರಿಂದ 13 ರವರೆಗೆ ಜಿಲ್ಲೆಯಾದ್ಯಂತ ಐದು ದಿನಗಳ ಆರ್ಥಿಕ ಸಾಕ್ಷರತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.ಈ ಕಾರ್ಯಕ್ರಮವನ್ನು ಹಣಕಾಸು ಸೇವೆಗಳ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಜಿಲ್ಲಾ ಪಂಚಾಯತಿಯ ನಿರ್ದೇಶನದಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು ಫೆ.9ರಂದು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್ ಅವರು ಸಪ್ತಾಹದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡುವ ಮೂಲಕ ಅಧಿಕೃತವಾಗಿ ಚಾಲನೆ ನೀಡಲಿದ್ದು ಜಿಲ್ಲೆಯಾದ್ಯಂತ 100 ಬ್ಯಾಂಕ್ ಶಾಖೆಗಳಲ್ಲಿ ಆರ್ಥಿಕ ಸಾಕ್ಷರತಾ ಸಪ್ತಾಹದ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕೆವೈಸಿ (ನೋ ಯುವರ್ ಕಸ್ಟಮರ್) ನಿಮ್ಮ ಗ್ರಾಹಕರನ್ನು ತಿಳಿಯಿರಿ ಎನ್ನುವುದು ಈ ಆರ್ಥಿಕ ಸಪ್ತಾಹದ ವಿಷಯವಾಗಿದ್ದು ಪ್ರಾಮುಖ್ಯತೆ ಹಾಗೂ ಓವಿಡಿ ಅಧಿಕೃತವಾಗಿ ಮಾನ್ಯವಾದ ದಾಖಲಾತಿಗಳ ಬಗ್ಗೆ ವಿಚಾರಗಳು, ಮರು ಕೆವೈಸಿ, ವಿಡಿಯೋ ಕೆವೈಸಿ, ಸೆಂಟ್ರಲ್ ಕೆವೈಸಿ, ಆಧಾರ್ ಓಟಿಪಿ ಹೀಗೆ ಹಲವಾರು ಬ್ಯಾಂಕಿನ ವಿಷಯಗಳ ಬಗ್ಗೆ ಮಾಹಿತಿಯನ್ನು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಣಕಾಸು ಸಾಕ್ಷರತಾ ಕೇಂದ್ರಗಳು ಹಾಗೂ ಸಿ.ಎಫ್.ಎಲ್‌ಸಿ.ಗಳು, ಬ್ಯಾಂಕಿನ ವ್ಯವಹಾರ ಪ್ರತಿನಿಧಿಗಳು ಹಾಗೂ ಬ್ಯಾಂಕಿನ ಶಾಖೆಗಳು ಶಿಬಿರವನ್ನು ಏರ್ಪಡಿಸುವ ಮೂಲಕ ಪ್ರಚಾರವನ್ನು ನೀಡಲಿದ್ದಾರೆ ಎಂದು ಜಿಲ್ಲಾ ಮಾರ್ಗದರ್ಶಿ ಬ್ಯಾಂಕಿನ ಮುಖ್ಯ ಪ್ರಬಂಧಕರಾದ ಮೋಹನ್ ಕುಮಾರ್ ವೈ.ಎನ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿದ್ರಾ ಕೊರತೆ?: ಬೆಂಗಳೂರಿನ ಅರ್ಧದಷ್ಟು ಮಂದಿ ನಿದ್ದೆ ಮಾಡುವುದು ಕೇವಲ 4–6 ಗಂಟೆ ಸಮಯ ಅಷ್ಟೇ

ಅನೇಕ ಸಮಸ್ಯೆಗಳು, ಒತ್ತಡಗಳ ನಡುವೆ ಮಹಾನಗರಿ ಬೆಂಗಳೂರಿನ ನಿವಾಸಿಗಳು ನಿದ್ರಾಹೀನತೆಯಿಂದ ಬಳಲುತ್ತಿದ್ದಾರೆ ಎಂದು ಇತ್ತೀಚಿನ ಸಮೀಕ್ಷೆಯೊಂದು ಹೇಳುತ್ತದೆ. ನಗರದ ಶೇ.56 ರಷ್ಟು ಜನರು ಪ್ರತಿ ರಾತ್ರಿ ನಿದ್ದೆ ಮಾಡುವ ಅವಧಿ ಆರು ಗಂಟೆಗಳಿಗಿಂತಲೂ ಕಡಿಮೆಯಾಗಿದೆ ಎಂದು ವಿಶ್ವ ನಿದ್ರಾ ದಿನದ ಸಂದರ್ಭದಲ್ಲಿ ಲೋಕಲ್ ಸರ್ಕಲ್ಸ್ ನಡೆಸಿದ ಇತ್ತೀಚಿನ ಸಮೀಕ್ಷೆಯು ಬಹಿರಂಗಪಡಿಸಿದೆ. ಮಾರ್ಚ್ 14ರಂದು ವಿಶ್ವ ನಿದ್ರಾ ದಿನ ಆಚರಿಸಲಾಗುತ್ತದೆ.

'ಭಾರತ 2025 ಹೇಗೆ ನಿದ್ರಿಸುತ್ತದೆ' ಎಂಬ ಶೀರ್ಷಿಕೆಯಡಿಯಲ್ಲಿ ಸಮೀಕ್ಷೆ ನಡೆಸಲಾಗಿದ್ದು, ನಗರದ 5,563 ವ್ಯಕ್ತಿಗಳಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗಿದೆ. ಕಳಪೆ ನಿದ್ರೆಯ ಗುಣಮಟ್ಟ ಮತ್ತು ಅದರ ಸಂಭಾವ್ಯ ಆರೋಗ್ಯ ಅಪಾಯಗಳ ಬಗ್ಗೆ ಹೆಚ್ಚುತ್ತಿರುವ ಕಳವಳವನ್ನು ಸಮೀಕ್ಷೆ ಎತ್ತಿ ತೋರಿಸುತ್ತದೆ.

ಸಮೀಕ್ಷೆಗೆ ಒಳಗಾದವರಲ್ಲಿ, ಶೇ.47 ರಷ್ಟು ಜನರು ಪ್ರತಿ ರಾತ್ರಿ ಕೇವಲ 4ರಿಂದ 6 ಗಂಟೆಗಳ ಕಾಲ ನಿದ್ರಿಸುತ್ತಿದ್ದಾರೆ ಎಂದು ವರದಿ ಮಾಡಿದರೆ, ಶೇ.9 ರಷ್ಟು ಜನರು ನಾಲ್ಕು ಗಂಟೆಗಳಿಗಿಂತ ಕಡಿಮೆ ನಿದ್ರೆ ಮಾಡುತ್ತಿದ್ದಾರೆ ಎಂದು ವರದಿಯಾಗಿದೆ. ಸಂಶೋಧನೆಗಳ ಪ್ರಕಾರ, ಪ್ರತಿಕ್ರಿಯಿಸಿದವರಲ್ಲಿ ಕೇವಲ 3% ಜನರು ಮಾತ್ರ ವೈದ್ಯರು, ಆರೋಗ್ಯ ತಜ್ಞರು ಶಿಫಾರಸು ಮಾಡುವ ದಿನಕ್ಕೆ 8ರಿಂದ 10 ಗಂಟೆಗಳ ಕಾಲ ನಿದ್ದೆ ಮಾಡುತ್ತಾರೆ.

ನಿದ್ದೆ ಅಡ್ಡಿಯಾಗುತ್ತಿರುವ ಅಂಶಗಳು

ಪದೇ ಪದೇ ಮೂತ್ರ ವಿಸರ್ಜನೆಗೆ ಹೋಗಬೇಕೆಂದೆನಿಸುವುದು ನಿದ್ರಾಭಂಗಕ್ಕೆ ಪ್ರಮುಖ ಕಾರಣವಾಗಿದೆ. ರಾತ್ರಿ ತಡವಾಗಿ ಮಲಗುವುದು, ಮುಂಜಾನೆ ಮನೆಯಲ್ಲಿ ಅವಸರದ ಕೆಲಸ, ಕಚೇರಿಗೆ





ಹೊರಡುವ ಒತ್ತಡ, ಮೊಬೈಲ್ ಕರೆಗಳು ಮತ್ತು ಇತರ ಕೆಲಸ–ಕಾರ್ಯಗಳು, ಒತ್ತಡಗಳು, ಹೊರಗಡೆಯಿಂದ ಬರುವ ಶಬ್ದದ ಅಡಚಣೆಯಿಂದ ನಿದ್ದೆ ಬರುತ್ತಿಲ್ಲ ಎಂದು ಹೇಳುವವರು ಅಧಿಕ ಮಂದಿಯಿದ್ದಾರೆ.

ಸಂಗಾತಿ ಅಥವಾ ಮಗುವಿಗೆ ಸಂಬಂಧಿಸಿದ ಅಡಚಣೆಗಳು ಮತ್ತು ಅನಾನುಕೂಲವಾದ ಹಾಸಿಗೆಗಳು ಸಹ ನಿದ್ರಾ ಭಂಗಕ್ಕೆ ಕಾರಣವಾಗಿದೆ. ಇದಲ್ಲದೆ, ಪ್ರತಿಕ್ರಿಯಿಸಿದವರಲ್ಲಿ ಶೇಕಡಾ 17ರಷ್ಟು ಮಂದಿ ನಿರ್ದಿಷ್ಟ ಅಡಚಣೆಗಳಿಲ್ಲದೆ ಎಂಟು ಗಂಟೆಗಳ ಕಾಲ ನಿರಂತರವಾಗಿ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ.

ತಮ್ಮ ನಿದ್ರೆಯ ಕೊರತೆಯನ್ನು ಸರಿದೂಗಿಸಲು, ಜನರು ಭಾನುವಾರದಂದು ಮಧ್ಯಾಹ್ನ ನಿದ್ರೆ ಮಾಡುತ್ತಾರೆ, ವಾರಾಂತ್ಯದಲ್ಲಿ ತಮ್ಮ ನಿದ್ರೆಯ ಸಮಯವನ್ನು ವಿಸ್ತರಿಸುತ್ತಾರೆ ಮತ್ತು ರಜಾದಿನಗಳಲ್ಲಿ ವಿಶ್ರಾಂತಿ ಪಡೆಯಲು ಬಯಸುತ್ತಾರೆ ಎಂದು ಸಮೀಕ್ಷೆ ಹೇಳುತ್ತದೆ. ಸುಮಾರು 28% ಜನರು ತಮ್ಮ ನಿದ್ರೆಯ ಕೊರತೆಯನ್ನು ಸರಿದೂಗಿಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಇದು ದೀರ್ಘಕಾಲದ ನಿದ್ರೆಯ ಕೊರತೆಗೆ ಕಾರಣವಾಗುತ್ತದೆ.

ನಿದ್ರಾಹೀನತೆಯಿಂದ ಅನಾರೋಗ್ಯ ಸಮಸ್ಯೆ

ನಿದ್ರಾಹೀನತೆಯಿಂದ ಹೃದಯರಕ್ತನಾಳದ ಕಾಯಿಲೆಗಳು, ತೂಕ ಹೆಚ್ಚಾಗುವುದು, ಟೈಪ್ 2 ಮಧುಮೇಹ ಮತ್ತು ದುರ್ಬಲಗೊಂಡ ಅರಿವಿನ ಕಾರ್ಯದಂತಹ ಹೆಚ್ಚಿನ ಅಪಾಯಕ್ಕೆ ಕಾರಣವಾಗುತ್ತದೆ. ಬೆಂಗಳೂರಿನ ನಿವಾಸಿಗಳಲ್ಲಿ ಉತ್ತಮ ನಿದ್ರೆಯ ನೈರ್ಮಲ್ಯ ಮತ್ತು ನಿದ್ರೆಗೆ ಸಂಬಂಧಿಸಿದ ಆರೋಗ್ಯ ಅಪಾಯಗಳ ಬಗ್ಗೆ ಹೆಚ್ಚಿದ ಜಾಗೃತಿಯ ತುರ್ತು ಅಗತ್ಯವನ್ನು ಸಂಶೋಧನೆಗಳು ಒತ್ತಿಹೇಳುತ್ತವೆ. ದೇಶಾದ್ಯಂತ ಇತ್ತೀಚಿನ ದಿನಗಳಲ್ಲಿ ಇದೇ ರೀತಿಯ ಪ್ರವೃತ್ತಿ ಕಂಡುಬಂದಿದೆ, ಪ್ರತಿಕ್ರಿಯಿಸಿದವರಲ್ಲಿ 59% ಜನರು ಆರು ಗಂಟೆಗಳಿಗಿಂತ ಕಡಿಮೆ ಸಮಯ ನಿರಂತರ ನಿದ್ದೆ ಮಾಡುತ್ತಿದ್ದಾರೆ. ದೇಶಾದ್ಯಂತ 348 ಜಿಲ್ಲೆಗಳಿಂದ 43,000 ಕ್ಕೂ ಹೆಚ್ಚು ಪ್ರತಿಕ್ರಿಯೆಗಳನ್ನು ಸಂಗ್ರಹಿಸಿದ ಸಮೀಕ್ಷೆಯು ಪ್ರತಿಕ್ರಿಯಿಸಿದವರಲ್ಲಿ 61% ಪುರುಷರು ಮತ್ತು 39% ಮಹಿಳೆಯರಾಗಿದ್ದಾರೆ.

### ನಿದ್ರಾ ಕೊರತೆಯ ಲಕ್ಷಣಗಳು

ದೈಹಿಕ: ತಲೆನೋವು, ನಿರಂತರ ಆಯಾಸ, ಕೈ ನಡುಕ, ಕಣ್ಣುರೆಪ್ಪೆ ಬೀಳುವಿಕೆ.

ಮಾನಸಿಕ: ಕಿರಿಕಿರಿ, ಅಸಂತೋಷ, ಅಸ್ಪಷ್ಟ ಚಿಂತನೆ, ಹಠಾತ್ ವರ್ತನೆ.

ಕಾರ್ಯಕ್ಷಮತೆ: ಕೆಲಸ ಅಥವಾ ಶಾಲೆಯಲ್ಲಿ ಏಕಾಗ್ರತೆ ಕೊರತೆ, ತೀರ್ಪು ನೀಡುವಲ್ಲಿ ತೊಂದರೆ.

ಇತರ: ಮೈಕ್ರೋಸ್ಲೀಪ್ಸ್ (ಕೆಲವೇ ಸೆಕೆಂಡುಗಳ ನಿದ್ರೆ), ನಿರಂತರ ನಿದ್ದೆ ಬರದಿರುವುದು.

ಕಾರಣಗಳು

ಜೀವನಶೈಲಿ: ಕೆಫೀನ್, ನಿಕೋಟಿನ್, ಮದ್ಯಪಾನದ ಸೇವನೆ, ರಾತ್ರಿ ತಡವಾಗಿ ಊಟ ಮಾಡುವುದು.

ಆರೋಗ್ಯ ಸಮಸ್ಯೆಗಳು: ನಿದ್ರೆಯಲ್ಲಿ ಉಸಿರುಕಟ್ಟುವಿಕೆ ಆತಂಕ ನೋವಿನ ಕಾಯಿಲೆಗಳು.

ಪರಿಸರ: ಅನುಕೂಲಕರವಲ್ಲದ ಹಾಸಿಗೆ, ಸಂಗಾತಿ ಅಥವಾ ಮಗುವಿನಿಂದ ಅಡಚಣೆಗಳು.

ಒತ್ತಡ: ಕೆಲಸದ ಒತ್ತಡ ಮತ್ತು ದೈಹಿಕ ಆರೋಗ್ಯದ ಸಮಸ್ಯೆಗಳು.

ಪರಿಹಾರಗಳು ಮತ್ತು ನಿರ್ವಹಣೆ

ಪರಿಹಾರಗಳು: ಲ್ಯಾವೆಂಡರ್ ಎಣ್ಣೆ, ಬೆಚ್ಚಗಿನ ಹಾಲು ಮತ್ತು ಜೇನುತುಪ್ಪ, ಕ್ಯಾಮೊಮೈಲ್ ಚಹಾ ಕುಡಿಯುವುದು.

ಜೀವನಶೈಲಿ ಬದಲಾವಣೆ: ಕೆಫೀನ್, ಮದ್ಯಪಾನ ಕಡಿಮೆ ಮಾಡುವುದು, ಮಲಗುವ ಮುನ್ನ ಟಿವಿ ನೋಡುವುದನ್ನು ತಪ್ಪಿಸುವುದು.



ವೈದ್ಯಕೀಯ ಸಲಹೆ: ನಿದ್ರಾಹೀನತೆಯು ದೀರ್ಘಕಾಲದ ಸಮಸ್ಯೆಯಾಗಿದ್ದರೆ ವೈದ್ಯರನ್ನು ಸಂಪರ್ಕಿಸುವುದು ಅತಿ ಮುಖ್ಯ.

ದೀರ್ಘಕಾಲದ ಪರಿಣಾಮಗಳು

ತೂಕ ಹೆಚ್ಚಳ, ಮಧುಮೇಹದ ಅಪಾಯ.

ಹೃದಯ ರಕ್ತನಾಳದ ಕಾಯಿಲೆಗಳ ಅಪಾಯ.

ಅರಿವಿನ ಕಾರ್ಯಗಳ ಮೇಲೆ ಪರಿಣಾಮ.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

## ಫೆ. 12 ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ – ಪೌರ ಕಾರ್ಮಿಕರು ಬೆಂಬಲ




12 ಫೆಬ್ರವರಿ 2026, ಜೆಸಿಟಿಯು ಮತ್ತು ಸಂಯುಕ್ತಹೋರಾಟ ಕರ್ನಾಟಕ ಜಂಟಿಯಾಗಿ ರೈತ ಕಾರ್ಮಿಕರಿಗೆ ಬೇಡಿಕೆಗಳಿಗಾಗಿ ನಡೆಸುತ್ತಿರುವ ಸಾರ್ವತ್ರಿಕ ಮುಷ್ಕರಕ್ಕೆ ತುಮಕೂರು ಪೌರ ಕಾರ್ಮಿಕ ಸಂಘ ತನ್ನ ಸಂಪೂರ್ಣ ಬೆಂಬಲ ಘೋಷಿಸಿದೆ,

ಕರ್ನಾಟಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ಪಾವತಿ, ಗುತ್ತಿಗೆ, ದಿನಗೂಲಿ, ಸ್ವಚ್ಛತಾ, , ಒಳಚರಂಡಿ, ಘನ ತ್ಯಾಜ್ಯ ವಿಲೇವಾರಿ, ಪಾರ್ಕ್, ಸ್ಮಶಾನ, ಶೌಚಾಲಯ, ಹಾಗೂ ಇತರ ಮುನಿಸಿಪಲ್ ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಳ್ಳುವುದಾಗಿ ಸಂಘವು ತನ್ನ ಪ್ರಕಣೆಯಲ್ಲಿ ತಿಳಿಸಿದೆ.

. ಎಲ್ಲಾ ಮುನಿಸಿಪಲ್ ಗುತ್ತಿಗೆ ಕಾರ್ಮಿಕರನ್ನು ಏಕಕಾಲಕ್ಕೆ ಖಾಯಂಗೊಳಿಸಬೇಕು; ಖಾಯಂಗೊಳಿಸುವ ತನಕ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೇರ ಪಾವತಿಯಡಿ ನೀಡಬೇಕು.ಕರ್ನಾಟಕದಲ್ಲಿಕನಿಷ್ಠವೇತನವನ್ನು ರೂ. 41,000/–ಕ್ಕೆ ಪರಿಷ್ಕರಿಸಬೇಕು.ಎಲ್ಲಾ ಪೌರಕಾರ್ಮಿಕರಿಗಾಗಿ ಜಾರಿ ಮಾಡಿರುವ ಗೃಹ ಭಾಗ್ಯ ಯೋಜನೆಯನ್ನು ಕೇವಲ ಖಾಯಂ ಪೌರಕಾರ್ಮಿಕರಿಗೆ ಸೀಮಿತ ಮಾಡಿ ಶೇ.85 ರಷ್ಟು ಸ್ವಚ್ಛತಾ ಕಾರ್ಮಿಕರಿಗೆ ತಾರತಮ್ಯ ಮಾಡಲಾಗಿದೆ. ಆದ್ದರಿಂದ ಎಲ್ಲಾ ನೇರಪಾವತಿ, ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಎಲ್ಲಾ ಮುನಿಸಿಪಲ್ ಕಾರ್ಮಿಕರಿಗೆ ಕಡ್ಡಾಯವಾಗಿ ಸುರಕ್ಷತಾ ಸಲಕರಣೆಗಳನ್ನು ನೀಡಬೇಕು. ತಿನ್ನಲು ಯೋಗ್ಯವಾದ ಶುಚಿ& ರುಚಿಯಾದ ಉಪಹಾರ ನೀಡಬೇಕು. ಪ್ರತಿತಿಂಗಳ 5 ನೇ ತಾರೀಕಿನ ಒಳಗೆ ಸಂಬಳ ನೀಡಬೇಕು. ಖಾಯಂಮೇತರ ಮುನಿಪಿಪಲ್ ಕಾರ್ಮಿಕರಿಗೆ ಕಾನೂನಿನಂತೆ 8 ಗಂಟೆ ಕೆಲಸ, ವಾರದ ರಜೆ ನೀಡಬೇಕು. ಕಾರ್ಮಿಕರ ಜೋತೆ ಗೌರವದಿಂದ ವರ್ತಿಸಬೇಕು. ಕಿರುಕುಳ ನಿಲ್ಲಿಸಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕನಿಷ್ಟ 3 ತಿಂಗಳಿಗೆ ಒಮ್ಮೆ, ಸ್ಥಳಿಯ ಸಂಸ್ಥೆ ಮಟ್ಟದಲ್ಲಿ ಮತ್ತು ಕನಿಷ್ಟ 6 ತಿಂಗಳಿಗೆ ಒಮ್ಮೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಎಲ್ಲಾ ಖಾಯಂಮೇತರ ಮುನಿಸಿಪಲ್ ಕಾರ್ಮಿಕರ ಸಮಸ್ಯೆಗಳನ್ನು ಅಲಿಸಲು ಸಭೆಗಳನ್ನು ನಡೆಸಲು ಸರ್ಕಾರ ಕ್ರಮವಹಿಸಬೇಕು.

ಎಲ್ಲಾ ಪೌರ ಕಾರ್ಮಿಕರ 12 ಫೆಬ್ರವರಿ 2026 ರಂದು ನಡೆಯುವ ಒಂದು ದಿನದ ಸಾರ್ವತ್ರಿಕ ಮುಷ್ಕರದಲ್ಲಿ ಕೆಲಸವನ್ನು ನಿಲ್ಲಿಸಿ ಪಾಲ್ಗೊಳ್ಳುತ್ತಾರೆ ಎಂದು ಇಂದು ತುಮಕೂರು ನ ಜನ ಚಳುವಳಿ ಕೇಂದ್ರದಲ್ಲಿ ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸೈಯದ್ ಮುಜಿಬ್ ವಹಿಸಿದ್ದರು. ಪ್ರಧಾನ ಕಾರ್ಯಧರ್ಶಿ ಎನ್. ಕೆ. ಸುಬ್ರಮಣ್ಯ, ಖಜಾಂಚಿ ಮಂಜುನಾಥ್ , ನರಸಿಂಹಮೂರ್ತಿ ಮುಂತಾದವರು ಮಾತನಾಡಿದರು. ಮಾಜಿ ಖಜಾಂಚಿ ಮಂಜುನಾಥ್ .ಕೆ. ಶ್ರದ್ಧಾಂಜಲಿ;

ತುಮಕೂರು ಪೌರ ಕಾರ್ಮಿಕರ ಸಂಘ. ರಿ ಕಳೆದ 2 ದಶಕಗಳಿಂದ ನಾಯಕತ್ವ ವಹಿಸಿ ಖಜಾಂಚಿಯಾಗಿ ಕೆಲಸ ಮಾಡಿದ್ದ ಕೆ. ಮಂಜುನಾಥ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು,

## ಕುಣಿಗಲ್ ತಾಲೂಕಿನ 36 ಗ್ರಾಮ ಪಂಚಾಯಿತಿಗಳಿಗೆ ಆಡಳಿತ ಅಧಿಕಾರಿಗಳ ನೇಮಕ




ಕುಣಿಗಲ್ ತಾಲೂಕಿನ 36 ಗ್ರಾಮ ಪಂಚಾಯಿತಿಗಳಿಗೆ ಆಡಳಿತ ಅಧಿಕಾರಿಗಳನ್ನು ಸರ್ಕಾರ ನೇಮಕ ಮಾಡಿದೆ ಆದೇಶ ನೀಡಿದೆ

ತಾಲೂಕಿನ 36 ಗ್ರಾಮ ಪಂಚಾಯಿತಿ ಆಡಳಿತ ಅವಧಿಯು ಮುಗಿದಿರುವುದರಿಂದ ಅಂತಹ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಾಲೂಕಿನ ತಾಲೂಕು ಮಟ್ಟದ ಅಧಿಕಾರಿಗಳನ್ನು ಪ್ರತಿ ನಾಲ್ಕು ಪಂಚಾಯಿತಿಗೆ ಒಬ್ಬರಂತೆ ನೇಮಕ ಮಾಡಿ ಆದೇಶ ನೀಡುವುದು ಈ ಕೆಳಕಂಡ ಅಧಿಕಾರಿಗಳನ್ನು ವಿವಿಧ ಪಂಚಾಯಿತಿಗಳ ಆಡಳಿತ ಅಧಿಕಾರಿಗಳನ್ನಾಗಿ ನೇಮಕ ಮಾಡಿದೆ 1)ಕಿತ್ನಮಂಗಲ 2)ಬಿಳಿ ದೇವಾಲಯ 3)ಹೇರೂರು4) ಬೇಗೂರು ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಯಾಗಿ ರಾಮಕೃಷ್ಣ ಸಹಾಯಕ ಕಾರ್ಯಪಾಲಕ ಅಭಿಯಂತರರು ಪಿ ಡಬ್ಲ್ಯೂ. 5)ಯಲಿಯೂರು 6)ಕೆಂಪನಹಳ್ಳಿ7 )ಇಪ್ಪಾಡಿ8) ಜೋಡಿ ಹೊಸಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿಯಾಗಿ ಎಂ. ವಿಜಯಕುಮಾರ್ ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕಾ ಇಲಾಖೆ. 9)ಉತ್ರಿದುರ್ಗ 10)ಚೌಡನಕುಪ್ಪೆ11) ತಾವರೆಕೆರೆ12) ಡಿ ಹೊಸಹಳ್ಳಿ ಗ್ರಾಮ ಪಂಚಾಯಿತಿಗಳಿಗೆ ರವಿ ಎಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೇಮಾವತಿ ನಾಲಾ ವಿಭಾಗ.13) ಮಡಿಕೆಹಳ್ಳಿ 1 4)ಡಿ ಹೊಸಳ್ಳಿ15) ಯಡಿಯೂರು16) ನಡೆಮಾವಿನಪುರ ಎ ಚ್ ವಿ ವಸಂತ್ ಕುಮಾರ್ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು. 17)ಉಜ್ಜಿನಿ18) ನಿಡಸಾಲೆ19) ಹಳೆ ಊರು20) ಹುಲಿಯೂರುದುರ್ಗ ಎಸ್ ರಾಜಪ್ಪ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.21) ಕೊಡುವತ್ತಿ 22)ಯಡವಾಣಿ 2 3) ಕೊಡಗಿಹಳ್ಳಿ 24 )ಪಡುವ ಗೆರೆ ಆರ್ ರಂಗನಾಥ್ ಸಹಾಯಕ ನಿರ್ದೇಶಕರು ಕೃಷಿ ಇಲಾಖೆ25) ಜಿನ್ನಾಗರ 26) ಕೆ ಹೊನಮಾಚನಹಳ್ಳಿ27) ಅಮೃತೂರು28) ಮಾರ್ಕೋನಹಳ್ಳಿ ರುದ್ರೇಶ್ ಸಹಾಯಕ ಕಾರ್ಯಪಲಕ ಅಭಿಯಂತರರು ಹೇಮಾವತಿ ನಾಗ ಉಪ ವಿಭಾಗ.29) ಭಕ್ತರಹಳ್ಳಿ30) ತೆರೆದಕುಪ್ಪಿ31) ಭಾಗೇನಹಳ್ಳಿ 32)ಕೊತ್ತಗೆರೆ ಎಂ ಎಸ್ ಆನಂದ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ ಉಪ ವಿಭಾಗ.33 )ಸಂತೆ ಮಾವುತರು34) ಕೊಪ್ಪ35) ಕಗ್ಗೇರಿ 36)ನಾಗಸಂದ್ರ ಗ್ರಾಮ ಪಂಚಾಯಿತಿಗಳಿಗೆ ಆಡಳಿತ ಅಧಿಕಾರಿಯಾಗಿ ಎಂ ವೇದಮೂರ್ತಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ಯ ಅಧಿನಿಯಮ 19 93 ರಂತೆ ಸರ್ಕಾರದ ಮಾರ್ಗ ಸೂಚಿಗಳಂತೆ ಕರ್ತವ್ಯ ನಿರ್ವಹಿಸಲು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಆದೇಶ ನೀಡಿದ್ದಾರೆ

# ಸರ್ಕಾರಿ ಆಸ್ತಿ ಎಂದರೆ ಹೇಳುವವರು ಕೇಳುವವರು ಯಾರೂ ಇಲ್ಲವಾ..?: ಕೆ.ಎನ್. ರಾಜಣ್ಣ ಗರಂ

ಮಧುಗಿರಿ : ಸರ್ಕಾರಿ ಆಸ್ತಿ ಎಂದರೆ ಹೇಳುವವರು ಕೇಳುವವರು ಯಾರೂ ಇಲ್ಲವಾ..? ಸರ್ಕಾರಿ ಕಚೇರಿಗಳ ಮುಂದೆ ಕಚೇರಿಗಳೇ ಕಾಣದಂತೆ ಅಂಗಡಿಗಳನ್ನು ಇಟ್ಟಿರುತ್ತಾರೆ. ಆದರೂ ನೀವು ನೋಡಿ ಸುಮ್ಮನಿರುತ್ತೀರಾ.. ಇದರ ಬಗ್ಗೆ ಕ್ರಮ ವಹಿಸಿ ಎಂದು ಪಿಡಬ್ಲ್ಯೂಡಿ ಅಧಿಕಾರಿಗಳ ಮೇಲೆ ಮಾಜಿ ಸಚಿವ, ಶಾಸಕ ಕೆ.ಎನ್. ರಾಜಣ್ಣ ಗರಂ ಆದರು.

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಶನಿವಾರ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ತಾಲೂಕಿನಲ್ಲಿ ಪಿಡಬ್ಲ್ಯೂಡಿ ಮುಖ್ಯ ರಸ್ತೆಗಳಲ್ಲಿ ಸರ್ಕಾರಿ ಕಚೇರಿ ಮುಂಭಾಗವೇ ಅಂಗಡಿಗಳಿಟ್ಟಿದ್ದು, ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ...ಕೊಡಿಗೇನಹಳ್ಳಿ ಯಲ್ಲೂ ಇದೇ ರೀತಿ ಇದೆ...ಆವರಗಲ್ಲು ಬಳಿ 50 ವರ್ಷದಿಂದ ಮುಖ್ಯ ರಸ್ತೆಯಲ್ಲೇ ಅಂಗಡಿಗಳಿವೆ ಎಂಬ ಆರೋಪಗಳಿವೆ. ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ನೋಡಿಕೊಂಡು ಸುಮ್ಮನಿದ್ದೀರಾ, ಮೊದಲು ಇದರ ಬಗ್ಗೆ ಕ್ರಮ ವಹಿಸಿ ಎಂದು ಸೂಚನೆ ನೀಡಿದರು.

ನನ್ನ ಕ್ಷೇತ್ರದಲ್ಲಿ ಯಾವುದೇ ಗ್ರಾಮದಲ್ಲೂ ರಸ್ತೆ ಇಲ್ಲ ಎಂಬ ದೂರುಗಳಿಲ್ಲ... ಆದರೂ ನೀವು ಕೆಲ ಗ್ರಾಮಗಳಿಗೆ ಬಸ್ ಬಿಡಲು ಮೀನಾಮೇಷ ಎಣಿಸುತ್ತಿದ್ದೀರಾ...ಏಕೆ..? ಕೆಲ ಗ್ರಾಮಗಳಲ್ಲಿ ಆಪರೇಟ್ ಆಗಿರುವ ಬಸ್ ಗಳನ್ನೂ ನಿಲ್ಲಿಸಿದ್ದೀರ ಎಂಬ ದೂರುಗಳಿವೆ. ಸುಮ್ಮನೆ ಕಲೆಕ್ಷನ್ ಆಗುವುದಿಲ್ಲ ಎಂದು ನಿಲ್ಲಿಸಿದರೆ ಆಗುವುದಿಲ್ಲ.. ಇದರ ಬಗ್ಗೆ ಕ್ರಮ ವಹಿಸಿ. ಸಾರ್ವಜನಿಕರು ಬಸ್ ಬಗ್ಗೆ ಅರ್ಜಿ ಸಲ್ಲಿಸಿದರೆ ಕ್ರಮ ವಹಿಸಿ ಬೆಳಗ್ಗೆ ಮಧ್ಯಾಹ್ನ ವಸಂತ ನರಸಾಪುರ ಕೈಗಾರಿಕಾ ಪ್ರದೇಶಕ್ಕೆ ಕೆಲಸಕ್ಕೆ ಹೋಗುತ್ತಿದ್ದು, ಈ ಬಾಗಕ್ಕೆ ಬಸ್ ಆಪರೇಟ್ ಆಗಿದ್ದು, ಯಾವುದೇ ಕಂಪ್ಲೇಂಟ್ ಬರಬಾರದು ಎಂದು ಕೆ.ಎಸ್.ಆರ್.ಟಿ.ಸಿ ಡಿಪೋ ವ್ಯವಸ್ಥಾಪಕ ಕಾಂತರಾಜು ಗೆ ಖಡಕ್ ಎಚ್ಚರಿಕೆ ನೀಡಿದರು




ಸಮಾಜ ಕಲ್ಯಾಣ ಇಲಾಖೆಯ ಮತ್ತು ಬಿಸಿಎಂ ಇಲಾಖೆಯ ಎಲ್ಲ ಹಾಸ್ಟೆಲ್ ಗಳಲ್ಲಿ ಪ್ರತೀ ತಿಂಗಳೂ ಕುಡಿಯುವ ನೀರಿನ ಟೆಸ್ಟ್ ಮಾಡಿಸಬೇಕು. ಯಾವುದೇ ಹಾಸ್ಟೆಲ್ ಗಳಲ್ಲಿ ನೀರಿನ ಸಮಸ್ಯೆ ಇಲ್ಲದಂತೆ ನೋಡಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ಎಲ್ಲಾ ಶಾಲೆಗಳಿಗೂ, ಹಾಸ್ಟೆಲ್ ಗಳಿಗೂ ಕುಡಿಯುವ ನೀರು ನೀಡುವುದು ಆಯಾ ಗ್ರಾ.ಪಂ ಜವಾಬ್ದಾರಿ ಇದರ ಬಗ್ಗೆ ಕ್ರಮ ವಹಿಸಿ ಎಂದು ತಾ.ಪಂ ಇಓ ಲಕ್ಷ್ಮಣ್ ಗೆ ಸೂಚನೆ ನೀಡಿದರು

ಕುಡಿಯುವ ನೀರಿನ ಬಗ್ಗೆ ಎಲ್ಲಿಯೂ ಸಮಸ್ಯೆ ಬರಬಾರದು. ಈ ಬಾರಿಯ ಬೇಸಿಗೆ ಕಠಿಣವಾಗಿರಲಿದೆ ಎನ್ನುವ ಮಾಹಿತಿ ಇದ್ದು, ಎಲ್ಲಿಯೂ ಸಮಸ್ಯೆಯಾಗಬಾರದು.. ಜಲಜೀವನ್ ಅಮೃತ್ 2 ಯೋಜನೆಗಳಲ್ಲಿ ಕುಡಿಯುವ ನೀರು ಕಲುಷಿತ ನೀರು ಮಿಶ್ರಣವಾಗಿ ಸಮಸ್ಯೆಯಾಗಬಾರದು. ಜಾತ್ರೆಗಳಲ್ಲಿ ಕುಡಿಯುವ ನೀರಿನ ಬಗ್ಗೆ ನಿಗಾ ವಹಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದಲ್ಲಿ ಎಷ್ಟು ವಾರ್ಡ್ ಗಳಿಗೆ ಎಷ್ಟು ದಿನಕ್ಕೊಮ್ಮೆ ನೀರು ನೀಡುತ್ತೀರ ಎಂದು ಮುಖ್ಯಾಧಿಕಾರಿ ಬಳಿ ಮಾಹಿತಿ ಪಡೆದು ಅಮೃತ್ 2, ನಗರೋತ್ಥಾನ ವರ್ಕ್ ನಡೆಯುತ್ತಿದೆ ಏಕೆ ಮಾಹಿತಿ ನೀಡಿಲ್ಲ ಎಂದು ಪ್ರಶ್ನಿಸಿದರು. ನಗರೋತ್ಥಾನ ಯೋಜನೆಯಡಿ ಎಷ್ಟು ರಸ್ತೆಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿ ಪಡೆದರು.

ತಾಲೂಕಿನಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯಾರ್ಥಿ ವೇತನ ಏಕೆ ನೀಡಿಲ್ಲ ಸಮಸ್ಯೆ ಏನು..? ಎಂದು ಪ್ರಶ್ನೆ ಮಾಡಿದ ಜಿಲ್ಲಾಧಿಕಾರಿಗಳು ಶೇ.100 ರಷ್ಟು ವಿದ್ಯಾರ್ಥಿ ವೇತನ ನೀಡಬೇಕು. ಇದಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆ ಬಗೆಹರಿಸಬೇಕು. ಮಕ್ಕಳ ಆಧಾರ್ ಬಗ್ಗೆ ಸ್ಪೆಷಲ್ ಕ್ಯಾಂಪ್ ಮಾಡಬೇಕು ಎಂದು ಸೂಚನೆ ನೀಡಿದಾಗ, ಕಂದಾಯ ಇಲಾಖೆಯ ವಿಎ ಗಳು ಆರ್.ಐ ಯಾವುದೇ ಅಧಿಕಾರಿಗಳು ಗ್ರಾಮೀಣ ಭಾಗಕ್ಕೆ ಹೋಗುತ್ತಿಲ್ಲ. ಎಂದು ದೊಡ್ಡೇರಿ ಕಣಿಮಯ್ಯ ಆರೋಪ ಮಾಡಿದಾಗ, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಜಿಲ್ಲೆಯಲ್ಲಿ ಎಲ್ಲಾ ಮಕ್ಕಳಿಗೂ ವಿದ್ಯಾರ್ಥಿ ವೇತನದ ಬಗ್ಗೆ ಇರುವ ತೊಡಕು ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು. ಈ ಬಾರಿ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಉತ್ತಮ ಫಲಿತಾಂಶ ದಾಖಲಾಗಬೇಕು ಎಂದರು.

# ಜೀವನದ ಜಂಜಾಟದಲ್ಲಿ ಅಧ್ಯಯನ ಪ್ರವಾಸ ಬಹಳ ಮುಖ್ಯಸ್ವಸಹಾಯ ಸಂಘದ ಸದಸ್ಯರಿಗೆ ಅಧ್ಯಯನ ಪ್ರವಾಸ

ವರದಿ ಗುಬ್ಬಿ ಭರತ್



ಗುಬ್ಬಿ: ಪ್ರತಿನಿತ್ಯ ಜೀವನ ಜಂಜಾಟದಲ್ಲಿ ತೊಡಗುವ ಸ್ವಸಹಾಯ ಸಂಘದ ಸದಸ್ಯರಿಗೆ ಅಧ್ಯಯನ ಪ್ರವಾಸ ಬಹಳ ಮುಖ್ಯವಾಗಿ ಬೇಕಾಗಿದ್ದು. ಡಾ// ಬಾಬು ಜಗಜೀವನರಾಮ್ ಆದಿ ಜಾಂಬವ ಅಭಿವೃದ್ಧಿ ಸೇವಾ ಟ್ರಸ್ಟ್ ವತಿಯಿಂದ ವಿಕಾಸಕ್ಕಾಗಿ ಅಧ್ಯಯನ ಪ್ರವಾಸ ಎಂಬ ಶೀರ್ಷಿಕೆಯೊಂದಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲಾಗಿದೆ ಎಂದು ಡಾ// ಬಾಬು ಜಗಜೀವನ ರಾಮ್ ಆದಿ ಜಾಂಬವ ಅಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ್ ತಿಳಿಸಿದರು. ಸಮುದಾಯದ ಅಭಿವೃದ್ಧಿಗಾಗಿ ಸಾಮಾಜಿಕ ಶೈಕ್ಷಣಿಕ ಆರ್ಥಿಕ ಹೀಗೆ ಅನೇಕ ಉದ್ದೇಶಗಳನ್ನು ಹೊಂದಿದ್ದು ಇದರ ಬಗ್ಗೆ ಸಮುದಾಯದ ಜನರಿಗೆ ತಿಳುವಳಿಕೆ ನೀಡುವ ಅಧ್ಯಯನ ಪ್ರವಾಸವಾಗಿದ್ದು, ಮಾದಿಗ ಸಮುದಾಯದ ಮೂಲ ದೇವತೆ ಮಾತಂಗೇಶ್ವರಿ ಬೆಟ್ಟವನ್ನೇರಿ ದರ್ಶನ ಮಾಡಿಸುವ ಮೂಲಕ ಕ್ಷೇತ್ರದ ಮಹತ್ವ ತಿಳಿಸಲಾಗಿದೆ ಎಂದರು. ಉಪಾಧ್ಯಕ್ಷ ಹೊಸಕೆರೆ ಬಸವರಾಜ್ ಮಾತನಾಡಿ ಡಾ// ಬಾಬು ಜಗಜೀವನ ರಾಮ್ ಅಭಿವೃದ್ಧಿ ಸೇವಾ ಟ್ರಸ್ಟ್ ಹಾಗೂ ಆದಿ ಜಾಂಬವ ಯುವ ಬ್ರಿಗೇಡ್ ಮೂಲಕ ಸ್ವಸಹಾಯ ಸಂಘದ ಸದಸ್ಯರಿಗೆ ಆರ್ಥಿಕ ಸ್ವಾವಲಂಬನೆಯ ಜೊತೆಗೆ ಪ್ರವಾಸ ಕೈಗೊಳ್ಳುವುದು ಸಹ ಸದಸ್ಯರ ಮಾನಸಿಕ ಸದೃಢತೆಹಟಿಜಜಜಿಟಿಜಜಯಾಗುತ್ತದೆ ಎಂದು ತಿಳಿಸಿದರು.

ಹಂಡನಹಳ್ಳಿ ಶಿವರಾಜ್ ಮಾತನಾಡಿ ಗುಬ್ಬಿ ತಾಲೂಕಿನಿಂದ ನಾಲ್ಕು ದಿನಗಳ ಕಾಲ ಅಧ್ಯಯನ ಪ್ರವಾಸ ಕೈಗೊಂಡು ಬಹಳ ಯಶಸ್ವಿಯಾಗಿ ಪೂರೈಸಲಾಗಿದೆ. ನಮ್ಮ ಸಮುದಾಯದ ಮೂಲ ಕಲೆ ಮತ್ತು ಸಂಸ್ಕೃತಿ ಬಗ್ಗೆ ಹಾಗೂ ಮುಂದಿನ ಪೀಳಿಗೆಯನ್ನು ಶೈಕ್ಷಣಿಕವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಅಭಿವೃದ್ಧಿ ಪಡಿಸುವ ಎಲ್ಲ ಮಾರ್ಗೋಪಾಯಗಳನ್ನು ಸ್ವಸಹಾಯ ಸಂಘದ ಸದಸ್ಯರಿಗೆ ಪ್ರವಾಸದ ಮೂಲಕ ತಿಳಿಸಿದ್ದು. ಇದರಿಂದ ಸ್ವಸಹಾಯ ಸಂಘದ ಸದಸ್ಯರು ಸಂತೋಷ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಪದಾಧಿಕಾರಿಗಳಾದ ಮುದ್ದಣ್ಣ, ನರಸಿಂಹಮೂರ್ತಿ, ಓಂಕಾರೇಶ್, ಮಾದೇವಯ್ಯ, ಯೋಗೀಶ್, ನಾಗರಾಜು, ರಾಜಣ್ಣ, ಸೇರಿದಂತೆ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

# ಮದ್ಯ, ಮಾದಕ ವಸ್ತುಗಳಿಂದ ಸಮಾಜದ ಸಮತೋಲನಕ್ಕೂ ಗಂಭೀರ ಹಾನಿ : ಶರಣಪ್ಪ ಸಲಾದಪುರ




ತುಮಕೂರು: ಸಮಾಜ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲೊಂದು ಮದ್ಯ ಮತ್ತು ಮಾದಕ ವಸ್ತುಗಳ ವ್ಯಸನವಾಗಿದೆ. ಇದು ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಹಾಳು ಮಾಡುವುದಷ್ಟೇ ಅಲ್ಲ, ಕುಟುಂಬದ ಶಾಂತಿ, ಆರ್ಥಿಕ ಸ್ಥಿತಿ ಮತ್ತು ಸಮಾಜದ ಸಮತೋಲನಕ್ಕೂ ಗಂಭೀರ ಹಾನಿಯನ್ನುಂಟು ಮಾಡುತ್ತಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರು ಹೇಳಿದ್ದಾರೆ.

ತುಮಕೂರಿನ ಶ್ರೀ ಸಿದ್ದಗಂಗಾ ಮಠದ ವತಿಯಿಂದ, ಮಠದ ಆವರಣದಲ್ಲಿ ಆಯೋಜಿಸಲಾದ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಆವರಣದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ನಿರ್ಮಿಸಲಾದ ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವಂತಹ ಜನಜಾಗೃತಿ ಮಳಿಗೆ ಉದ್ಘಾಟಿಸಿ ಮಾತನಾಡಿದರು.

ಒಬ್ಬ ವ್ಯಕ್ತಿ ವ್ಯಸನಕ್ಕೆ ಒಳಗಾದರೆ ಅದರ ಪರಿಣಾಮ ಅವನೊಬ್ಬನಿಗಷ್ಟೇ ಸೀಮಿತವಾಗುವುದಿಲ್ಲ. ಕುಟುಂಬದಲ್ಲಿ ಕಲಹ, ಆರ್ಥಿಕ ಸಂಕಷ್ಟ, ಮಕ್ಕಳ ಶಿಕ್ಷಣದಲ್ಲಿ ಅಡೆತಡೆ ಹಾಗೂ ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತವೆ. ಆದ್ದರಿಂದ ವ್ಯಸನ ತಡೆಯುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು ಮದ್ಯ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದೆ. ಇಂತಹ ಪ್ರದರ್ಶನ ಮಳಿಗೆಗಳ ಮೂಲಕ ಮದ್ಯ ಮತ್ತು ಮಾದಕ ವಸ್ತುಗಳ ಹಾನಿಕರ ಪರಿಣಾಮಗಳನ್ನು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಜನರಿಗೆ ತಿಳಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನಮ್ಮ ಯುವಕರು ದೇಶದ ಭವಿಷ್ಯ. ಅವರು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ವ್ಯಸನಗಳಿಂದ ದೂರ ಉಳಿಯುವುದು ಅತ್ಯಂತ ಅಗತ್ಯವಾಗಿದೆ. ಪೋಷಕರು, ಶಿಕ್ಷಕರು ಮತ್ತು ಸಮಾಜದ ಪ್ರತಿಯೊಬ್ಬರೂ ಈ ದಿಕ್ಕಿನಲ್ಲಿ ಮಕ್ಕಳಿಗೆ ಮಾರ್ಗದರ್ಶನ ನೀಡಬೇಕು ಎಂದರು.ಶ್ರೀ ಸಿದ್ದಗಂಗಾ ಮಠವು ಸದಾ ಶಿಕ್ಷಣ, ಸೇವೆ ಮತ್ತು ಸತ್ಸಂಸ್ಕಾರಗಳ ಬೆಳಕನ್ನು ಹರಡುತ್ತಿರುವ ಮಹಾನ್ ಸಂಸ್ಥೆಯಾಗಿದೆ. ಇಂತಹ ಪವಿತ್ರ ಸ್ಥಳದಲ್ಲಿ ಈ ಜಾಗೃತಿ ಕಾರ್ಯಕ್ರಮ ಆಯೋಜಿಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಎಲ್ಲರೂ ಮದ್ಯ ಮತ್ತು ಮಾದಕ ವಸ್ತುಗಳಿಂದ ದೂರ ಉಳಿದು ಆರೋಗ್ಯಕರ, ಶಾಂತಿಯುತ ಮತ್ತು ಸುಖಮಯ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ಶರಣಪ್ಪ ಸಲಾದಪುರ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಮಹೇಶ್, ಮಂಡಳಿ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ನರಸಿಂಹಮೂರ್ತಿ ಸೇರಿದಂತೆ ಇತರರು ಉಪಸಿತರಿದ್ದರು.

# ಮಕ್ಕಳೊಂದಿಗೆ ಬಿಸಿಯೂಟ ಸೇವಿಸಿದ ಸುರೇಶ್‌ಗೌಡ

ತುಮಕೂರು:ಶಾಲಾ ಮಕ್ಕಳ ಬಿಸಿಯೂಟಕ್ಕೆ ಹುಳು ಬಿದ್ದಿರುವತೊಗರಿ ಬೇಳೆ ಸರಬರಾಜು ಮಾಡಲಾಗುತ್ತಿದೆಎಂದುಇತ್ತೀಚೆಗೆ ವಿಧಾನಸಭಾಕಲಾಪದಲ್ಲಿಧ್ವನಿ ಮಾಡಿ ಸರ್ಕಾರದ ಗಮನ ಸೆಳೆದಿದ್ದ ಗ್ರಾಮಾಂತರ ಶಾಸಕ ಬಿ.ಸುರೇಶ್‌ಗೌಡರು, ಶನಿವಾರತಮ್ಮಕ್ಷೇತ್ರ ಹೊನಸಿಗೆರೆ ಶಾಲೆಯ ಮಕ್ಕಳೊಂದಿಗೆ ಬಿಸಿಯೂಟ ಸೇವನೆ ಮಾಡಿದರು.



ಬಿಸಿಯೂಟದ ರುಚಿಗುಣಮಟ್ಟದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಶಾಸಕರು, ವಿದ್ಯಾರ್ಥಿಗಳಿಗೆ ನಿತ್ಯಾಇದೇಗುಣಮಟ್ಟದಆಹಾರ ನೀಡುವಂತೆ ಸಿಬ್ಬಂದಿಗೆ ಸೂಚಿಸಿದರು.

ಮಾಜಿ ಸಂಸದ ದಿ.ಎಸ್.ಮಲ್ಲಿಕಾರ್ಜುನಯ್ಯಅವರ ಹುಟ್ಟೂರಾದ ಹೊನಸಿಗೆರೆಯ ಈ ಶಾಲೆಯಲ್ಲಿಶಾಸಕರುಮೊದಲು ಎಸ್‌ಡಿಎಂಸಿ ಸಭೆ ನಡೆಸಿ ಕುಂದುಕೊರತೆ ಪರಿಶೀಲಿಸಿದರು.ನಂತರ ವಿದ್ಯಾರ್ಥಿಗಳೊಂದಿಗೆ ಊಟ, ಬಾಳೆ ಹಣ್ಣು ಸವಿದರು.

ಬೆಂಗಳೂರಿನ ಜಿಂದಾಲ್‌ಕಂಪನಿಯ ಸಿಎಸ್‌ಆರ್ ನಿಧಿಯಡಿಅಭಿವೃದ್ಧಿಯಾಗಿರುವ ಈ ಶಾಲೆಯಉದ್ಘಾಟನಾ ಸಮಾರಂಭದಲ್ಲಿ ಆಗಿನ ರಾಜ್ಯಪಾಲರಾದ ವಜೂಭಾಯಿ ವಾಲಾ ಹಾಗೂ ಅಂದಿನ ಶಿಕ್ಷಣ ಸಚಿವತನ್ವೀರ್ ಸೇಠ್ ಭಾಗವಹಿಸಿದ್ದರು. ಶಾಸಕರು ಹೊನಸಿಗೆರೆ ಶಾಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ವಿದ್ಯಾರ್ಥಿಗಳ ಪೋಷಕರು ಹಾಜರಿದ್ದರು.

SP NEWS ಸಣ್ ಸುದ್ದಿ

## ಹಂದಲಗೆರೆ ಗ್ರಾಮದಲ್ಲಿ ಅವೈಜ್ಞಾನಿಕ ರೀತಿಯಲ್ಲಿ ಚರಂಡಿ ಕಾಮಗಾರಿ ಗ್ರಾಮಸ್ಥರ ವಿರೋಧ!

ಕುಣಿಗಲ್ :ತಾಲ್ಲೂಕಿನ ಹುಲಿಯೂರುದುರ್ಗ ವ್ಯಾಪ್ತಿಯ ಹಂದಲಗೆರೆ ಗ್ರಾಮದಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ ಸುಮಾರು ಐದು ಲಕ್ಷ ರೂಪಾಯಿ ವೆಚ್ಚದಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಿಸಲಾಗುತ್ತಿದ್ದು ಇದಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ ಗ್ರಾಮದ ಖಾಸಗಿ ಜಮೀನಿನಲ್ಲಿ ಸರ್ಕಾರಿ ಹಣ ಬಳಸಿ ಅವೈಜ್ಞಾನಿಕ ರೀತಿಯಲ್ಲಿ ಚರಂಡಿ ನಿರ್ಮಿಸಲಾಗುತ್ತಿದ್ದು ಇದರಿಂದ ಗ್ರಾಮದಲ್ಲಿ ಉತ್ಪತ್ತಿಯಾಗುವ ಕಲುಷಿತ ನೀರು ಪಕ್ಕದಲ್ಲಿರುವ ಕೆರೆಗೆ ಸೇರುವ ಕಾರಣದಿಂದ ಜಾನುವಾರುಗಳು ಕುಡಿಯುವ ನೀರು ಕಲುಷಿತಗೊಳ್ಳಲಿದ್ದು ಕೂಡಲೆ ಕಾಮಗಾರಿ ಸ್ಥಗಿತಗೋಳಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದು ಈ ಬಗ್ಗೆ ಸ್ಥಳಿಯ ಗ್ರಾಮ ಪಂಚಾಯಿತಿ ತಹಶೀಲ್ದಾರ್.ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣ ಅಧಿಕಾರಿ ಹಾಗೂ ಕೆ.ಆರ್.ಡಿ.ಎಲ್ ಅಧಿಕಾರಿಗಳಿಗೆ ಗ್ರಾಮಸ್ಥರು ದೂರು ನೀಡಿದರು ಸಹ ಇದುವರೆಗೆ ಯಾವುದೆ ಕ್ರಮ ಕೈಗೊಂಡಿಲ್ಲ ಗ್ರಾಮಸ್ಥರ ವಿರೋಧದ ನಡುವೆ ಗುತ್ತಿಗೆದಾರ ಕಾಮಗಾರಿ ನಡೆಸುತ್ತಿದ್ದಾನೆ ಈ ಬಗ್ಗೆ ಕ್ರಮ ಕೈಗೋಳ್ಳಬೇಕಿದ್ದ ಅಧಿಕಾರಿಗಳು ಯಾವುದೆ ಕ್ರಮ ಕೈಗೊಂಡಿಲ್ಲ ಕಾಮಗಾರಿ ಸ್ಥಳಕ್ಕೆ ಇದುವರೆಗೆ ಯಾರು ಬೇಟಿ ನೀಡಿಲ್ಲ,ಪೋನ್ ಕರೆ ಮಾಡಿದರು ಅಧಿಕಾರಿಗಳು ಕರೆ ಸ್ವೀಕರಿಸುತ್ತಿಲ್ಲ ಕಾಮಗಾರಿ ಪ್ರಾರಂಭಿಸಿರುವ ಬಗ್ಗೆ ಸ್ಥಳದಲ್ಲಿ ಯಾವುದೆ ರೀತಿಯ ನಾಮಫಲಕ ಅಳವಡಿಸಿಲ್ಲ ಕೂಡಲೆ ಗ್ರಾಮದಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿ ನಿಲ್ಲಿಸದಿದ್ದಲ್ಲಿ ತುಮಕೂರಿನಲ್ಲಿರುವ ಕೆ.ಆರ್.ಡಿ.ಎಲ್ ಕಚೇರಿಯ ಮುಂಭಾಗ ಪ್ರತಿಭಟನೆ ನಡೆಸಬೇಕಾಗುತ್ತದೆ ಇದಕ್ಕೆ ಅವಕಾಶ ನೀಡದೆ ಕಾಮಗಾರಿ ಸ್ಥಗಿತಗೊಳಿಸಿ ಎಂದು ಗ್ರಾಮಸ್ಥರಾದ ಕಾಂತರಾಜು,ನಂದೀಶ,ರಮೇಶ್,ಲೊಕೇಶ್ ಒತ್ತಾಯಿಸಿದ್ದಾರೆ



## ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಆಯೋಗದ ಅಧ್ಯಕ್ಷರ ಭೇಟಿ

ತುಮಕೂರು: ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ: ಮೂರ್ತಿ ಎಲ್. ಅವರು ಫೆಬ್ರವರಿ 17 ಮತ್ತು 18ರಂದು ತುಮಕೂರು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

ಜಿಲ್ಲೆಯ ದಲಿತ ಮುಖಂಡರೊಂದಿಗೆ ಫೆಬ್ರವರಿ 18ರಂದು ಬೆಳಿಗ್ಗೆ 11 ರಿಂದ 12.30 ಗಂಟೆಯವರೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕುಂದು ಕೊರತೆ ಸಭೆಯನ್ನು ಆಯೋಜಿಸಲಾಗಿದ್ದು, ತುಮಕೂರು ತಾಲ್ಲೂಕಿನ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮುಖಂಡರು ಸಭೆಯಲ್ಲಿ ಭಾಗವಹಿಸಬೇಕೆಂದು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು(ಗ್ರೇಡ್–1) ಮನವಿ ಮಾಡಿದ್ದಾರೆ.

## ಕುಡಿಯುವ ನೀರಿನ ಸಮಸ್ಯೆ : ಸಹಾಯವಾಣಿ ಕೇಂದ್ರ ಸ್ಥಾಪನೆ

ತುಮಕೂರು: ತುಮಕೂರು ತಾಲ್ಲೂಕು ವ್ಯಾಪ್ತಿಯ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ತಾಲ್ಲೂಕು ಕಚೇರಿ ಹಾಗೂ ತಾಲ್ಲೂಕು ಪಂಚಾಯತಿಯಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ತಾಲ್ಲೂಕಿನಾದ್ಯಂತ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಸಂಭವಿಸಿದಲ್ಲಿ ಸಾರ್ವಜನಿಕರು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಸಹಾಯವಾಣಿ ಸಂಖ್ಯೆ 0816–2278496, 0816–2277503ನ್ನು ಸಂಪರ್ಕಿಸಬೇಕೆಂದು ತಹಶೀಲ್ದಾರ್ ರಾಜೇಶ್ವರಿ ಮನವಿ ಮಾಡಿದ್ದಾರೆ.

## ಶಿರಾ ತಾಲ್ಲೂಕು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಪತ್ತಿನ ಸಹಕಾರ ಸಂಘದ ಚುನಾವಣೆ ಫೆ. 19ಕ್ಕೆ

ಶಿರಾ:ಶಿರಾ ತಾಲ್ಲೂಕು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಪತ್ತಿನ ಸಹಕಾರ ಸಂಘದ 5 ವರ್ಷಗಳವರೆಗೆ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯು ಫೆ. 19ಕ್ಕೆ ನಿಗಧಿಯಾಗಿದೆ ಎಂದು ಚುನಾವಣಾಧಿಕಾರಿಗಳಾದ ಶ್ರೀನಿವಾಸ್ ತಿಳಿಸಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಫೆ. 9 ಕಡೆ ದಿನ, ಫೆ. 12ರಂದು ನಾಮ ಪತ್ರ ಪರಿಶೀಲನೆ, ನಾಮಪತ್ರ ವಾಪಸ್ಸಾತಿಗೆ ಫೆ. 13 ಕಡೆಯ ದಿನ, ಫೆ.19ಕ್ಕೆ ಚುನಾವಣೆ ನಡೆಯಲಿದೆ ಎಂದು ತಿಳಿಸಿದ್ದಾರೆ.

# ಏಕಾಶಿಲಾ ನಾಡಲ್ಲಿ ಮೊಳಗಿದ ದಲಿತ ಮುಖ್ಯಮಂತ್ರಿ ಕೂಗು:

# ರಾಜಕೀಯ ವಲಯದಲ್ಲಿ ಮತ್ತೆ ದಲಿತ ಸಿಎಂ ಸದ್ದು

ಮಧುಗಿರಿ: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಾದ ಕೆ.ಹೆಚ್. ಮುನಿಯಪ್ಪ ಅವರು ಮಧುಗಿರಿಯ ಜಡೇಗೊಂಡನಹಳ್ಳಿ ಗ್ರಾಮದ ತಮ್ಮ ಅಳಿಯ ಮತ್ತು ಮಗಳ ಮನೆಯ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ತಾಲ್ಲೂಕಿನ ಗಡಿ ಭಾಗದಲ್ಲಿ ಸಚಿವರನ್ನು ಸ್ವಾಗತಿಸಿದ ಆದಿಜಾಂಭವ ಸಮುದಾಯದ ಮುಖಂಡರು ಮುಂದಿನ ದಲಿತ ಮುಖ್ಯಮಂತ್ರಿ ಕೆ.ಎಚ್.ಮುನಿಯಪ್ಪಾಜೀಗೆ ಎಂದು ಜೈಕಾರದ ಘೋಷಣೆಗಳನ್ನು ಕೂಗುತ್ತಾ ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ಹಾರ ತುರಾಯಿಗಳನ್ನು ಹಾಕಿ ಅದ್ದೂರಿಯಾಗಿ ಸ್ವಾಗತಿಸಿದರು.

ಪಟ್ಟಣದಿಂದ ಕೂಗಳತೆಯ ದೂರವಿರುವ ತಮ್ಮ ಮಗಳಾದ ಕೆ.ಜಿ.ಎಫ್ ಶಾಸಕಿ ರೂಪಕಲಾ ಹಾಗೂ ಅಳಿಯ ಶಶಿಧರ್ ಅವರ ಮನೆಯ ಕಾರ್ಯಕ್ರಮಕ್ಕೆ ಆಗಮಿಸಿದ್ದ ವೇಳೆ ತಾಲ್ಲೂಕಿನ ಆದಿಜಾಂಭವ ಸಮುದಾಯದ ಮುಖಂಡರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿ ಸಚಿವರನ್ನು ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ವಿಜೃಂಭಣೆಯಿಂದ ಕರೆತರಲಾಯಿತು ಪ್ರಗತಿಪರ ಚಿಂತಕ ಡಾ.ಕಾಳೇನಹಳ್ಳಿ ನರಸಿಂಹಯ್ಯ ಹಾಗೂ ಜನಾಂಗದ ಹಲವು ಮುಖಂಡರ ನೇತೃತ್ವದಲ್ಲಿ ಸಚಿವರಿಗೆ ಹೂಮಾಲೆಗಳಿಂದ ಸ್ವಾಗತಿಸಿ ಜೈಕಾರ ಘೋಷಣೆಗಳನ್ನು ಕೂಗುತ್ತ ನಮ್ಮ ಜನಾಂಗದ ಹಿರಿಯ ರಾಜಕಾರಣಿ ಕೇಂದ್ರ ಸರ್ಕಾರದಲ್ಲಿ ಸತತವಾಗಿ ಗುರುತಿಸಿಕೊಂಡು ಹೈಕಮಾಂಡ್ ಜೊತೆಗೆ ಉತ್ತಮ ಒಡನಾಟ ಹೊಂದಿರುವ ಈಗ ರಾಜ್ಯಸರ್ಕಾರದಲ್ಲಿ ಮಂತ್ರಿಯಾಗಿ ಸರಳ ಸಜ್ಜನಿಕೆಗೆ ಹೆಸರುವಾಸಿಯಾಗಿ ಹೆಚ್ಚು ಪ್ರಚಾರ ಪ್ರಿಯರಾಗದೆ ತಾವೆಷ್ಟೊ ತಮ್ಮ ಕೆಲಸವೆಷ್ಟೂ ಎಂಬಂತೆ ಎಲೆಮರೆಕಾಯಿತರಹ



ಕೆಲಸ ಮಾಡುತ್ತ ಬರುತ್ತಿರುವ ನಮ್ಮ ಜನಾಂಗದ ದೈವತಾರೆಯಾದ ಕೆ.ಎಚ್.ಮುನಿಯಪ್ಪಾಜೀ ಯವರು ಮುಖ್ಯಮಂತ್ರಿಯಾಗಲು ಎಲ್ಲಾ ಅರ್ಹತೆಗಳಿದ್ದು ಯಾವುದೇ ಕಪ್ಪು ಚುಕ್ಕೆ ಇಲ್ಲದ ಹಿರಿಯ ರಾಜಕಾರಣಿ ಇವರು ನಮ್ಮ ಜನಾಂಗದ ಜೊತೆ ಇತರ ಎಲ್ಲಾ ವರ್ಗಗಳ ಜೊತೆಗೂ ಉತ್ತಮ ಬಾಂಧವ್ಯ ಬೆಳಿಸಿಕೊಂಡಿದ್ದಾರೆ ಹಾಗಾಗಿ ಕಾಂಗ್ರೆಸ್ ಹೈಕಮಾಂಡ್ ಇವರ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿಯಾಗುವಂತೆ

ಮಾಡುವ ಮೂಲಕ ಆದಿಜಾಂಭವ ಸಮುದಾಯದ ನಮ್ಮ ಮುನಿಯಪ್ಪಾಜೀರವರು ಮುಂದಿನ ದಲಿತ ಮುಖ್ಯಮಂತ್ರಿ ಎಂದು ಜನಾಂಗದ ಮುಖಂಡರು ಘೋಷವಾಕ್ಯ, ಜೈಕಾರ, ಹರ್ಷೋದ್ಗಾರಗಳನ್ನು ಮುಗಿಲು ಮುಟ್ಟುವಂತೆ ಕೂಗಿದರು ಇದೇ ವೇಳೆ ಇತಿಹಾಸ ಪ್ರಸಿದ್ಧ ಮಧುಗಿರಿಯ ಶಕ್ತಿದೇವತೆ ಶ್ರೀ ದಂಡಿನ ಮಾರಮ್ಮನ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು ನಂತರ ಪ್ರವಾಸಿ ಮಂದಿರಕ್ಕೆ ತೆರಳಿದ ಸಚಿವರು ಸಮುದಾಯದ ಮುಖಂಡರ ಜೊತೆ ಕೆಲ ಕಾಲ ಚರ್ಚಿಸಿ ಈಗಾಗಲೇ ರಾಜ್ಯಾದ್ಯಂತ ಮಾದಾರ ಮಹಾಸಭಾ ಸಂಘಟನೆ ತುಂಬಾ ಚುರುಕಾಗಿ ಸಂಘಟನೆಯಾಗುತ್ತಿದ್ದು ಜನಾಂಗದ ಹಿತ ದೃಷ್ಟಿಯಿಟ್ಟುಕ್ಕೊಂಡು ಕೆಲಸ ಮಾಡುವ ಗುರಿ ಹೊಂದಿದೆ ಪ್ರತಿಯೊಬ್ಬರೂ ಸಂಘದ ಸದಸ್ಯತ್ವವನ್ನು ನೊಂದಾಯಿಸಿ ಬೆಂಬಲಿಸಬೇಕೆಂದು ಮನವಿ ಮಾಡಿ ನಮ್ಮ ಸಮುದಾಯವು ಅರ್ಥಿಕವಾಗಿ ಹಿಂದುಳಿದಿದೆ ನೀವೆಲ್ಲರೂ ಸಂಘಟಿತರಾಗಿ ಸಮುದಾಯಕ್ಕೆ ಎಲ್ಲಾ ರೀತಿಯ ಅರ್ಥಿಕ,ಸಾಮಾಜಿಕ,ಶೈಕ್ಷಣಿಕ, ರಾಜಕೀಯ ಶಕ್ತಿಯನ್ನು ತುಂಬಲು ಜನಾಂಗದ ಸರ್ವರೂ ಸಹಕರಿಸಬೇಕೆಂದು ತಿಳಿಸಿದರು.

ರಾಜ್ಯದ ವಿವಿಧೆಡೆ ಮತ್ತೆ ಮುನ್ನೆಲೆಗೆ ಬಂದ ದಲಿತ ಸಿಎಂ ಕೂಗು ಹಲವು ಕಡೆ ಕೇಳಿ ಬರುತ್ತಿದ್ದು ಈ ಬೆಳವಣಿಗೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು ಅವರ್ ಬಿಟ್ಟು ಇವರ್ ಬಿಟ್ಟು ದಲಿತರೊಬ್ಬರು ಕಾಂಗ್ರೆಸ್ ನಲ್ಲಿ ಮುಖ್ಯಮಂತ್ರಿಯಾಗುತ್ತಾರ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ ಎನ್ನಬಹುದು




EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.